
ಸನ್ಮಾರ್ಗದರ್ಶಿ



1984

ಸನ್ಮಾರ್ಗದರ್ಶಿ

(ಸ್ವರಚಿತ ನಾಜ್ಮೂಲಗಳು)

ಅಮೀರ್ ಅಹಮ್ಮದ್

ಪ್ರಕಾಶನ

ನಿಸರ್ಗಾಲಯ ಪ್ರಕಾಶನ
ಸಂ. 267, ಕೋರಮಂಗಲ ಗ್ರಾಮ
ಬೆಂಗಳೂರು–560 034.

SANMARGADARSHI

By AMEER AHMED

First Impression : August 1984

Copies : 1000

Pages : 32

Price : Rs. 4-00

PRINTED AT

Srilakshmi Printers

Adugodi, Banglore-30

ಸಮರ್ಪಣೆ

ಜಡ-ಚೀತಕಗಳ, ಅಸ್ತಿತ್ತ್ವದ ಮೂಲಾಧಾರವಾಗಿಯೂ,

ಜೀವಿ ಸಂಕುಲದ, ಅಸ್ತಿತ್ತ್ವದ ಸರ್ವಸ್ವವಾಗಿಯೂ,

ಅನಂತಿತ ಸ್ವರೂಪದಿ, ಸಮಷ್ಟಿ-ಪರಿಪಾಲನೆಯ,

ಮೂಲ ಬಂಡವಾಳವಾಗಿರುವ ವಿರಾಟ್ ವಿಪರ್ಯಾಸಿ,

"ಪ್ರಕೃತಿಗೆ" ....



ಪ್ರಸ್ತಾವನೆ

ಪ್ರಕೃತಿ ಪರಿಕರಗಳಿಂದ ಶೋಭಯಮಯನವಾಗಿ ಕಂಗೊಳಿಸುತ್ತಿರುವ ಈ ಸುಂದರ ಸೃಷ್ಟಿಗೆ ನನ್ನ ಆಗಮನವಾಗಿ ಎರಡು ದಶಕಗಳ ಮೇಲೆ ಎರಡು ವರ್ಷಗಳಾಗಿವೆ. ಈ ನಡುವೆ ನನ್ನ ಯೋಚನಾ ಸ್ಮೃತಿಯ ವಿವೇಚನಾ ಪಲ್ಲಟಕ್ಕೆ ಸ್ಪಂದಿಸುತ್ತಿರುವ ವಿಭಿನ್ನಮಯ ಕ್ಷೇತ್ರಗಳಿಗೆ ಸಂಭಧಿಸಿದಂತಹ ಮೌಲಿಕ ವಿಚಾರಗಳನ್ನು ನನ್ನ ಸರದಿಯ ಜೀವಿತದಲ್ಲಿ ಉತ್ಕನಿತವಾಗಿ ತರ್ಕಿಸಿ ಸಮೀಕ್ಷಿಸುವ, ಚಟುವಟಿಕೆಗಳಲ್ಲಿ ನಿರತನಾಗಿದ್ದು, ಲೋಕೋಭಿನ್ನ ರುಚಿಯ ರೂಪರೇಶೆಗಳನ್ನು ಅನಾಸೂಚಿತವಾಗಿ ಭಾವನಾತ್ಮಕ ಅವಲೋಖನೆಯ ಮೂಲಕ ವಿಶ್ಲೇಷಿಸಲು ಪ್ರಯತ್ನಿಸಿದ್ದೇನೆ.

ನೈನಿಕ ಮೌಲ್ಯಗಳ ದೃಷ್ಟಿಯಿಂದ ಜಗತ್ತು ದಿನೇ ದಿನೇ ಅವಸಾನದ ಸನಿಹ ಸಮೀಪಿಸುತ್ತಿರುವುದು ವಿಷಾಧನೀಯವಾಗಿದೆ. ಮನುಸಂಕುಲ ತ್ವರಿತವಾಗಿ ಗಂಭೀರಮಯ ವಿಚಾರಗಳ ಬಗ್ಗೆ ಆಸಕ್ತಿಯುತ ಗಮನವನ್ನು ನೀಡಬೇಕಾದದ್ದು ಅನಿವಾರ್ಯವಾಗಿದ್ದು ಸಮಸ್ಯೆಗಳಿಂದ ತಾತ್ಕಾಲಿಕವಾಗಿ ತಪ್ಪಿಸಿಕೊಳ್ಳಲು ಸಮಯ ಸಾಧಕತನಕ್ಕೆ ದುಂಬಲು ಬೀಳುವುದು ಸರಿಯಲ್ಲ, ಆದರ್ಶಮಯ ವಿಚಾರಗಳನ್ನು ಆಲೋಚಿಸುವಂತಾಗಲು ಕೆಲವು ಮಹತ್ವಪೂರ್ಣವೆಂದೆನಿಸುವ ವ್ಯಾಖ್ಯಾನಗಳನ್ನು "ಸನ್ಮಾರ್ಗದರ್ಶಿ"ಯಲ್ಲಿ ವಾಚಕರ ಅವಗಾಹನೆಗಾಗಿ ನಿವೇದಿಸಿದ್ದೇನೆ.

ಸಾಮಾಜಿಕ, ವೈಜ್ಞಾನಿಕ, ಆಧ್ಯಾತ್ಮಿಕ ಈ ಮೂರು ಕ್ಷೇತ್ರಗಳನ್ನು ಹೆಚ್ಚು ಗಮನದಲ್ಲಿಟ್ಟುಕೊಂಡು ಸನ್ಮಾರ್ಗದರ್ಶಿ"ಯಲ್ಲಿ ಬರುವಂತಹ ಅನರ್ಘ್ಯ ವ್ಯಾಖ್ಯನಗಳನ್ನು ಭಾವನಾತ್ಮಕವಾಗಿ ಅವಲೋಖಿಸಿದ್ದೇನೆ. ಈ ನಿಟ್ಟಿನಲ್ಲಿ ನನಗೆ ಪರಿಪೂರ್ಣ ಸ್ಫೂರ್ತಿಯ ಪ್ರಭಾವ ಬೀರಿದ "ಪ್ರಕೃತಿ" ಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಈ ನನ್ನ ಚೊಚ್ಚಲು ಕೃತಿಯನ್ನು ಸಹೃದಯವಾಚಕರು ಬರಮಾಡಿಕೊಳ್ಳುತ್ತಾರೆಂದು ಭಾವಿಸಿದ್ದೇನೆ.

ಇಂತಿ.

ಅಮೀರ್ ಅಹಮ್ಮದ್

ವಾಚಕರ ಅಭಿಪ್ರಾಯಗಳಿಗೆ ಸುಸ್ವಾಗತ
ನನ್ನ ವಿಳಾಸ
ಅಮೀರ್ ನಂ. 267, ಕೋರಮಂಗಲ, (ಪೋಸ್ಟ್)
ಬೆಂಗಳೂರು-34

ಕಠಿಣ ಪದಗಳ ಅರ್ಥಗಳು

1) ಸಮಷ್ಟಿ-ದೈವ, ಸೃಷ್ಟಿಯ ಮೂಲ.

2) ಆಧ್ಯಾತ್ಮ—ಸೃಷ್ಟಿಕರ್ತನಿಗೆ ಸಂಬಂಧಿಸಿದ್ದು.

3) ಲೌಕಿಕ—ಸಾಂಸಾರಿಕ ವಿಚಾರಗಳಿಗೆ ಸಂಬಂಧಿಸಿದ್ದು.

4) ಸೈದ್ಧಾಂತಿಕ—ಸಿದ್ಧಾಂತಕ್ಕೆ ಸಂಬಂಧಿಸಿದ್ದು.

5) ಸರ್ವಂತರ್ಯಾಮಿ—ದೇವರು.

6) ಪ್ರಕೃತಿ—ಸಹಜಸ್ಥಿತಿಯಲ್ಲಿರುವ ವಿಶಾಲಸ್ವರೂಪಿ.

7) ಸ್ಮೃತಿ—ಅರಿಯುವ ಗ್ರಾಹ್ಯತಾ ಮಟ್ಟ.

8) ಸರ್ವಂಕಷಿತ—ಸರ್ವ ವಿಚಾರಗಳಿಗೂ ಸಂಬಂಧಿಸಿದ.

9) ವಿದ್ವತ್ತೆ—ಬುದ್ಧಿವಂತಿಕೆ.

10) ಭಾವನಾತ್ಮಕ—ಭಾವನೆಗಳಿಗೆ ಸಂಬಂಧಿಸಿದ.

11) ಆತ್ಮೀಯತೆ—ಆಪ್ತತೆ, ವಿಶಿಷ್ಟಮಯ ಅನ್ಯೋನ್ಯತೆ.

12) ಪ್ರಚಲಿತ—ಪ್ರಸಕ್ತ, ವರ್ತಮಾನ.

13) ದಾರ್ಷ್ಟ್ಯತೆ—ಅಹಂಕಾರ.

14) ಪ್ರತಿಭೆ—ಬುದ್ಧಿವಂತಿಕೆ, ಜಾಣಾಕ್ಷತೆ.

15) ತ್ವರಿತ—ಶೀಘ್ರ

16) ಜನಸಂಕುಲ—ಮಾನವಜೀವಿಗಳು.

17) ಅವಲೋಕನ—ವೀಕ್ಷಣೆ.

18) ದೌರ್ಬಲ್ಯಗಳು—ದೋಷಗಳು.

19) ಕಾಮ—ಲೈಂಗಿಕ ವಿಚಾರಗಳಿಗೆ ಸಂಬಂಧಿಸಿದ್ದು.

20) ಆವಿಷ್ಕೃತ—ಕಂಡುಬರುವಂತಹ.

21) ಸಂಕುಚಿತ—ಸಣ್ಣ ಪುಟ್ಟ, ಅಲಕ್ಷ್ಯ.

22) ಗಹನಮಯ—ಮುಖ್ಯವಾದ.

23) ಅವ್ಯಾಹತ—ವಿಶಾಲ, ಪೂರ್ಣ.

24) ಸನ್ಮಾರ್ಗ—ಸದಾಚಾರ.

25) ಆದರ್ಶಮಯಮೌಲ್ಯಗಳು—ನೈತಿಕ ವಿಚಾರಗಳಿಗೆ ಸಂಬಂಧಿಸಿದವು.

26) ದೂರದೃಷ್ಟಿ—ವಿಶಾಲ, ಆಲೋಚನೆಗೆ ಸಂಬಂಧಿಸಿದ್ದು.

27) ವಿವೇಚನೆ—ಸಮೀಕ್ಷೆ.

28) ಸಂದಿಗ್ಧ—ಕ್ಲಿಷ್ಟಮಯವಾದ.

29) ನೈತಿಕ—ಸದ್ವಿಚಾರ.

30) ಚಂಚಲ—ನಿಯಂತ್ರಣವಿಲ್ಲದಿರುವಿಕೆ.

ಸನ್ಮಾರ್ಗದರ್ಶಿ

1. ಪ್ರತಿಭಾ ದಾನ ಮಾಡದ ಪ್ರತಿಭಾವಂತ; ವಿದ್ಯಾದಾನ ಮಾಡದ ವಿದ್ಯಾವಂತ ಮಾನವೀಯತಾ ದೃಷ್ಟಿಯಲ್ಲಿ ನಿಷ್ಪ್ರಯೋಜಕರಾಗುತ್ತಾರೆ.

2. ಪ್ರತಿಭೆಗೆ–ಪುರಸ್ಕಾರ; ಉತ್ಸಾಹಕ್ಕೆ-ಪ್ರೋತ್ಸಾಹ; ಪ್ರಗತಿಗೆ–ಪ್ರಶಂಸೆ ಆಸಕ್ತಿಗೆ–ಆದ್ಯತೆ; ಅನ್ಯಾಯಕ್ಕೆ-ಖಂಡನೆ; ಅರಳುವ ಮನಕ್ಕೆ-ಸಾಂತ್ವನತೆ; ಜಾಣ್ಮೆಯಲ್ಲಿ ನಿಯಮಿತ ಸ್ಪರ್ಧೆಯಾಗದ ಹೊರತಾಗಿ ಮಾನವನ ಪ್ರಗತಿಯು ಕುಂಠಿತರೂಪದಲ್ಲಿ ಮುನ್ನಡೆಯಬೇಕಾಗುತ್ತದೆ.

3. ಉಪಕಾರಗಳು-ಅಪಕಾರಗಳಾದರೆ; ಕೃತಜ್ಞತೆಗಳು–ಕೃತಘ್ನತೆಗಳಾದರೆ; ವಿಶ್ವಾಸಗಳು-ಅವಿಶ್ವಾಸಗಳಾದರೆ; ಸಿದ್ಧಾಂತಗಳು-ದೃಷ್ಟಾಂತಗಳಾದರೆ ಈ ಜಗತ್ತು ನಾಶದಂಚಿಗೆ ತಲುಪಿ ಮನುಸಂಕುಲ ಸಾಮೂಹಿಕ ಆತ್ಮಹತ್ಯೆಗೊಳಗಾಗುತ್ತದೆ.

4. ಹಣವಿಲ್ಲದಿದ್ದರೆ-ಹಣಕ್ಕೆ ಹಂಬಲ; ಹಣ ಪ್ರಾಪ್ತಿಯಾದರೆ-ಅಧಿಕಾರಕ್ಕೆ ಹಂಬಲ; ಅಧಿಕಾರ ಪ್ರಾಪ್ತಿಯಾದರೆ–ಪ್ರತಿಷ್ಠೆಗೆ ಹಂಬಲ; ಪ್ರತಿಷ್ಠೆ ಪ್ರಾಪ್ತಿ-ಯಾದರೆ ಸರ್ವಾಧಿಕಾರಕ್ಕೆ ಹಂಬಲ. ಹೀಗೆ ಹಂಬಲಕ್ಕೆ ಕೊನೆಯೆಂಬುದೇ ಮನುಷ್ಯನಲ್ಲಿಲ್ಲ.

5. ಲೌಕಿಕ ಜೀವನದಲ್ಲಿ–ಕಾಮ ಉದ್ದೇಶ; ಕ್ರೀಡೆಯಲ್ಲಿ-ಸೋಲು ಗೆಲುವು ವಾದದಲ್ಲಿ-ಹಠಮಾರಿತನವನ್ನು ನಾವು ತ್ಯಜಿಸಬೇಕು. ಲೌಕಿಕ -ಜೀವನದಲ್ಲಿ– ಪರಸ್ಪರ ಅರಿವಿನ ಸಮಮನಸ್ಕತೆ, ಕ್ರೀಡೆಯಲ್ಲಿ-ಕ್ರೀಡಾಮನೋಭಾವ; ವಾದದಲ್ಲಿ-ನೇರತರ್ಕತೆಯ ಮನೋಪ್ರವೃತ್ತಿಗಳು ನಮ್ಮಲ್ಲಿ ಮೂಡಿ ಬರಬೇಕು.

6. ತ್ಯಾಗ, ನಿಸ್ವಾರ್ಥತೆ, ಆತ್ಮೀಯತೆ, ಸ್ನೇಹ, ಬಲಿದಾನ, ಕೊಡುಗೆ, ಇವುಗಳನ್ನು ಎಂದೂ ವ್ಯವಹಾರಿಕ ದೃಷ್ಟಿಯಲ್ಲಿ ಅಳೆಯಲಾಗದು.

7. ಶೋಷಣೆಯು ಪ್ರಭಾವವು ಇರುವ ತನಕವೂ ಜಗತ್ತು ಸಮಾನತೆ-ಯಿಂದ ಕೂಡಿರಲಾರದು.

8. ನಿಜವಾದ ಸಿದ್ಧಾಂತಕ್ಕೆ ಬಾರದವ, ಸಿಹಿ-ಕಹಿಗಳ ಚಂಚಲ ಚಕ್ರದ ಬಲಿ ಪಶುವಾಗಿ ಸ್ಮೃತಿ ನಿಯಂತ್ರಣವನ್ನು ಕಳೆದುಕೊಂಡು ಕಂಗಾ-ಲಾಗಬೇಕಾಗುತ್ತದೆ.

9. ಇಂದಿನ ಜನರ ದೇಶಾಭಿಮಾನಗಳ ಅತಿರೇಕತೆಯು, ವಿಶ್ವಾಭಿಮಾನಕ್ಕೆ ಅಡ್ಡಿಯಾದಂತಿದೆ.

10. ವ್ಯಕ್ತಿತ್ವ ಹೊಂದದ ವ್ಯಕ್ತಿಗಳು; ವ್ಯಕ್ತಿತ್ವವ ಹೊಂದಿದವರು ನಿಷ್ಕ್ರಿಯರಾದವರು ಸಮಾಜಕ್ಕೆ ಭಾರವಾಗಿರುತ್ತಾರೆ.

11. ಮಾನವನಿಗೆ ರಾಜಕೀಯ ಪ್ರಜ್ಞೆ ಬರುವ ಮುನ್ನ ಈಗಿನ ದೇಶಗಳೆಂಬ ಗಡಿ ರೇಖೆಗಳು ಎಲ್ಲಿದ್ದವು?

12. ಮುಂಬರುವ ಒಂದೊಂದು ವರ್ಷವೂ ಇತಿಹಾಸದ ಕಾಲ ಚಕ್ರದಲ್ಲಿ ಉರುಳಿ ಹೋದ ಶತ-ಶತಮಾನಗಳಿಗಿಂತಲೂ ವೈಜ್ಞಾನಿಕ ವಿಚಾರಗಳ ಬೆಳ-ವಣಿಗೆಯ ದೃಷ್ಟಿಯಿಂದ ಮಹತ್ವಪೂರ್ಣವಾಗಬಲ್ಲದು.

13. ತತ್ವಗಳು ತತ್ವಗಳಾಗಿ ಉಳಿಯದೆ ಮಾನವನ ಜೀವನದ ಸುಗಮ ಸಕ್ರಿಯ ತೀವ್ರತೆಗೆ ಸತ್ವಯುತ ಪ್ರೇರಣೆಗಳನ್ನು ನೀಡುವಂತಾಗಬೇಕಾಗಿದೆ.

14. ಪ್ರಚಲಿತ ವಿಶ್ವದ ಇಂದಿನ ಜನತೆಯು ವೈಜ್ಞಾನಿಕ ದೃಷ್ಟಿಕೋನಗಳ ಸಂಘಟನೆ ಸಾಧ್ಯವಿದೆ, ಆದರೆ ಎಲ್ಲಾ ಧಾರ್ಮಿಕ ದೃಷ್ಟಿಗಳ ಸಂಘಟನೆ ಅಸಾಧ್ಯವಾಗಿರುವುದು ತೀರಾ ವಿಷಾದನೀಯ ವಿಚಾರವಾಗಿದೆ.

15. ಸಾಮಾಜಿಕತೆಯಲ್ಲಿ-ವಿಶ್ವ ಬಂಧುತ್ವವನ್ನು; ಆರ್ಥಿಕತೆಯಲ್ಲಿ ಸಮಾನ-ವಿತರಣೆಯನ್ನು; ವೈಜ್ಞಾನಿಕ ಅಭ್ಯುದಯದಲ್ಲಿ-ದೂರದೃಷ್ಟಿಯನ್ನು; ಸಾಂಸ್ಕೃತಿಕವಾಗಿ ಸದ್ಭಾವನೆಯನ್ನು; ಧಾರ್ಮಿಕವಾಗಿ-ಸಮನ್ವಯೀಭಾವನೆಯನ್ನು;

ರಾಜಕೀಯವಾಗಿ ಸಮ ಮನಸ್ಕತೆಯನ್ನು, ಸ್ನೇಹತ್ವದಲ್ಲಿ-ವಿಶ್ವಾಸವನ್ನು; ಭಾವನಾತ್ಮಕತೆಯಲ್ಲಿ ಆತ್ಮೀಯತೆಯನ್ನು ಎಂದಿನ ತನಕ ಮನುಸಂಕುಲ ಸಾಮೂಹಿಕವಾಗಿ ಪರಿಪಾಲಿಸದೋ ಅಂದಿನ ತನಕ ಜಗತ್ತು ಜಂಜಾಟ-ತಪ್ತತೆಗಳಿಂದ ಮುಕ್ತವಾಗಲಾರದು.

16. ಹಲ್ಲಿಗೆ-ತಾನಿರುವ ಗೋಡೆಯೇ ವಿಶ್ವ; ಕಪ್ಪೆಗೆ ತಾನಿರುವ-ಕೆರೆಯೇ ವಿಶ್ವ; ಮೀನಿಗೆ ತಾನಿರುವ-ಜಲವೇ ವಿಶ್ವ; ಕೀಟಕ್ಕೆ ತಾನಿರುವ ಹೊಲವೇ ವಿಶ್ವ; ಮೊಲಕ್ಕೆ ತಾನಿರುವ-ಹುಲ್ಲು ಪೊದೆಯೇ ವಿಶ್ವ; ಗಿಡ ಮರಗಳಿಗೆ ತಾವಿರುವ-ಸ್ಥಳವೇ ವಿಶ್ವ; ಕ್ರೂರ ಮೃಗಗಳಿಗೆ-ತಾವಿರುವ ಕಾಡೇ ವಿಶ್ವ; ವಿವೇಚನಾತ್ಮಕವಾಗಿ ಮನುಷ್ಯನಿಗೆ ಮಾತ್ರ ಈ ಜಗತ್ತಿನ ಭೌಗೋಳಿಕ ವಿಸ್ತಾರದ ಅರಿವಿದೆ, ವಿವೇಚನಾ ರಹಿತವಾಗಿ ಮುದ್ದಾದ ಪಕ್ಷಿ ಸಂಕುಲ ಮಾತ್ರವೇ ಜಾಗತಿಕ ವಿಸ್ತಾರವನ್ನು ಮನುಷ್ಯನಿಗಿಂತ ಹೆಚ್ಚಾಗಿ ಬಲ್ಲದಾಗಿದೆ. ಹೀಗೆ ಜೀವಿ ಸಂಕುಲ ಪ್ರತ್ಯೇಕವಾಗಿ ಜಗತ್ತನ್ನು ಕಾಣುತ್ತಲಿದೆ.

17. ಪ್ರಕೃತಿಯ ಉಗಮದ ಅಸ್ತಿತ್ವವೇ ಸರ್ವಂತರ್ಯಾಮಿಯ ಸಮಷ್ಟಿ ಪರಿಪಾಲನೆಯ ಮೂಲ ಬಂಡವಾಳವಾಗಿದೆ.

18. ಮನೋ ವಿಕಲ್ಪಿತವಾದ ಈ ಜಗತ್ತಿನಲ್ಲಿ ಸ್ವಕಪೋಲಕಲ್ಪಿತವಾದ ಭ್ರಮೆಗಳಿಂದ ಮಾನವರು ಭ್ರಮಾನಿರತ ನಿರೀಕ್ಷಕರಾಗಿರಲು ಜಗತ್ತಿನ ಚಂಚಲಮಯ ಸ್ತರಗಳುಳ್ಳ ಪರಿಕರಗಳ ಸೃಜನತಾ ವೈವಿಧ್ಯತೆಯೇ ಕಾರಣೀಕೃತವಾಗಿದೆ.

19. ನಿಯಂತ್ರಣಕ್ಕೆ ಹೊರತಾದ ಆಕಾಂಶೆಗಳು ವ್ಯಕ್ತಿಯೊಬ್ಬನಲ್ಲಿಯ ನಿರ್ಣಾಯಕ ಶಕ್ತಿಯನ್ನು ಕುಗ್ಗಿಸುತ್ತದೆ.

20. ಸತ್ಯಕ್ಕೆ ಜಯ ದೊರಕುವುದಕ್ಕಿಂತ; ಅಸತ್ಯಕ್ಕೆ ಸೋಲಾಗುವುದು ಮಹತ್ವವುಳ್ಳದಾಗಿದೆ.

21. ಇಂದಿನಂತೆ-ನಾಳೆ ಇರದು; ನಾಳೆಯಂತೆ-ನಾಡದ್ದಿರದು; ನಾಳಿನ ನಿರೀಕ್ಷೆಯಲ್ಲಿ ಇಂದಿನದನ್ನು ವ್ಯರ್ಥಪಡಿಸಿಕೊಳ್ಳದೆ ಇಂದಿನ ದಿನಗಳನ್ನು ಫಲಪ್ರದಗೊಳಿಸಿಕೊಳ್ಳಬೇಕು.

22. ಲೌಕಿಕ ಜೀವನದಲ್ಲಿ ಕಾಣುವ ಶಿಸ್ತು ವ್ಯಕ್ತಿ ಬಾಹ್ಯದಲ್ಲಿರುತ್ತದೆ. ಏಕೆಂದರೆ ಇಲ್ಲಿ ವ್ಯಕ್ತಿ ನಿರತ ಕ್ರಿಯಾ ಚಟುವಟಿಕೆಗಳೇ ಪ್ರಧಾನವಾಗಿರುತ್ತವೆ.

23. ಮಾನವ ದುಃಖಿಯಾಗಿ ಸಂಕಟದಲ್ಲಿರುವಾಗ ಮತ್ತೊಬ್ಬರ ಸಹಾಯವನ್ನು ಅಪೇಕ್ಷಿಸುತ್ತಾನೆ. ತಾನು ಸುಖಿಯಾಗಿರುವಾಗ ಮಾತ್ರ ಮತ್ತೊಬ್ಬರಿಗೆ ಸಹಾನುಭೂತಿಯನ್ನೂ ತೋರದಷ್ಟು ಸ್ವಾರ್ಥಿಯಾಗಿರುತ್ತಾನೆ. ಇದು ಮಾನವನ ಪರಿಹಾರ ರಹಿತ ದೌರ್ಬಲ್ಯವಾದಂತಿದೆ.

24. ಗಹನಕಾರ್ಯಗಳಲ್ಲಿ ತೋರುವಂತಹ ಉದಾಸೀನವು ಸಣ್ಣ ಅಲಕ್ಷಿತ ಕಾರಣಗಳೇ ಭಾರೀ ಅನಾಹುತಗಳಿಗೆ ಕಾರಣವಾಗಬಲ್ಲವು.

25. ವೈಜ್ಞಾನಿಕ ಮನೋಭಾವ ವಿದ್ಯಾವಂತ ಜನರಲ್ಲಿ ಹೆಚ್ಚಾಗುತ್ತಿರುವಂತೆಲ್ಲಾ ಆಧ್ಯಾತ್ಮ ನಂಬುಗೆಗಳು ಗಣನೀಯವಾಗಿ ಕುಂಠಿತಗೊಳ್ಳುತ್ತಲಿವೆ.

26. ಜೀವನದ ಬಗ್ಗೆ ವ್ಯಕ್ತಿಯೊಬ್ಬನಿಗೆ ಮಾರ್ಗದರ್ಶನ ನೀಡುವ ಸಾಮರ್ಥ್ಯ ಸಮಾಜಕ್ಕಿಲ್ಲವಾದರೆ ಆತನ ನಡುವಳಿಕೆಯನ್ನು ಏಕೆ ವಿಮರ್ಶಿಸಿ ಆತನನ್ನು ಪೇಚುಗೀಡು ಮಾಡಬೇಕು?

27. ಜೀವಿತದ ಮೂಲಭೂತ ಹಂತಗಳು ಪುನಃ ಪುನಃ ಪುನರಾವರ್ತನೆಗೊಳ್ಳಲಾರವಾದ್ದರಿಂದ ಪಶ್ಚಾತ್ತಾಪಗಳಿಗೆ ಅವಕಾಶ ಮಾಡಿಕೊಳ್ಳುವುದು ದೌರ್ಭಾಗ್ಯವಾದೀತು!

28. ನಾವು ಪಶ್ಚಾತ್ತಾಪ ಪಡುವ ಘಟನೆ ಕೆಲ ನಿಮಿಷಗಳಲ್ಲಿ ಇಲ್ಲವೇ ಕೆಲ ಸೆಕೆಂಡುಗಳಲ್ಲಿ ಸಂಭವಿಸಿದರೂ ಅದರ ಪರಿಣಾಮ ಮಾತ್ರ ಜೀವನ ಪರ್ಯಂತರ ಪ್ರಭಾವ ಬೀರುವಂತಾಗುತ್ತದೆ.

29. ಇಂದಿನ ವೈಜ್ಞಾನಿಕ ಯುಗದಲ್ಲಿ ಮಾನವನಿಗೆ ದೈಹಿಕ ಶ್ರಮಕ್ಕಿಂತ ಮಾನಸಿಕ ಪರಿಶ್ರಮ ಗಣನೀಯವಾಗಿ ಹೆಚ್ಚಾಗಿದೆ.

30. ಮೂಲಉದ್ದೇಶದ ಬಗ್ಗೆ ಆಲೋಚನಾ ಮನಸ್ಸು ಹಿಡಿತದಲ್ಲಿಲ್ಲವಾದರೆ ಗುರಿಯ ಬಗ್ಗೆ ಹಾಕಿಕೊಂಡ ಯೋಜನೆಗಳು ನಾಪಾಸಾಗಬಲ್ಲವು.

31. ಭಾವನೆಗಳನ್ನು ವ್ಯಕ್ತಪಡಿಸಲು ಭಾಷೆ ಇದೆಯೇ ವಿನಃ ಭಾಷೆ-
ಯನ್ನು ಪ್ರದರ್ಶಿಸಲು ಭಾವನೆಗಳಿರುವುದಿಲ್ಲ.

32. ಜಗತ್ತಿನಲ್ಲಿ ಜನತೆಗಾಗಿ ಸರ್ಕಾರಗಳಿವೆಯೇ ವಿನಃ ಸರ್ಕಾರಗಳಿಗಾಗಿ
ಜನತೆ ಇರುವುದಿಲ್ಲ.

33. ಸೂರ್ಯನಿಗೆ ರಾತ್ರಿಯೆಂಬುದು ಹೇಗೆ ತಿಳಿದಿಲ್ಲವೋ ಹಾಗೆಯೇ
ಹೃದಯ ಶ್ರೀಮಂತಿಕೆಯುಳ್ಳವನಿಗೆ ದಾರಿದ್ರ್ಯವೆಂಬುದು ತಿಳಿದಿಲ್ಲ.

34. ಸಾತ್ತ್ವಿಕ ವಿದ್ವತ್ತತೆ, ತಾತ್ತ್ವಿಕ ವಿದ್ವತ್ತತೆಗಳ ಸಂಗಮವೇ
ಸರ್ವಾಂಕಷಿತ ವಿದ್ವತ್ತತೆಯಾಗಿದೆ.

35. ಜನ ಪ್ರಗತಿಗೆ ದುಡಿಯಬೇಕೆಂಬ ನಿಸ್ವಾರ್ಥಮಯ ಪ್ರತಿಭಾವಂತನಿಗೆ
ಜನತೆ ಸಹಕರಿಸದಿದ್ದರೆ ಆತ ಕ್ರಮೇಣ ಜನದ್ವೇಶಿಯಾಗುತ್ತಾನೆ.

36. ಮಾನವನು ವಿಚಾರ ಶೀಲನಾಗಿ ಕ್ರಿಯಾ ನಿರತನಾಗಬೇಕೇ ವಿನಃ
ಕ್ರಿಯಾ ನಿರತನಾಗಿ ವಿಚಾರ ಶೀಲನಾಗುವುದು ಸರಿಯಲ್ಲ.

37. ಜಗತ್ತಿನಲ್ಲಿ ಸಾಮೂಹಿಕನ್ಯಾಯ ಸಮತತ್ತ್ವ ಆಧರಿತ ಸಾಮಾಜಿಕ
ವ್ಯವಸ್ಥೆ ರೂಪಿತಗೊಳ್ಳದಿದ್ದರೆ ಪ್ರತ್ಯೇಕಿತ ಮನೋಭಾವದ ದುಷ್ಟಶಕ್ತಿಗಳು
ಸರ್ವಾಧಿಕಾರಕ್ಕೆ ಹೊಂಚು ಹಾಕುತ್ತಲಿರುತ್ತವೆ.

38. ದೈಹಿಕ ಸುಖಕ್ಕಿಂತ ಮಾನಸಿಕ ಸುಖವು ಸ್ಮೃತಿಯಲ್ಲಿ ಹೆಚ್ಚು
ಕಾಲ ನಿಲ್ಲಬಲ್ಲದಾಗಿದೆ.

39. ವಿಷಯಗಳ ಮನನೀಯತೆಗೆ ಭಾವನೆಗಳು ಸ್ಪಂದಿಸಬೇಕಾಗುತ್ತದೆ.
ಇಲ್ಲವಾದರೆ ವಿಷಯ ಜ್ಞಾನ ಕೇವಲ ಆಡಂಭರಕ್ಕಷ್ಟೆ ಆಗಬಲ್ಲದಾಗಿದೆ.

40. ನಿರಂತರ ಗೆಲುವುಗಳಿಂದಾಗುವ ಅಮಿತಾನಂದಕ್ಕಿಂತ ಸೋಲುಗಳ
ಬಳಿಕ ಪ್ರಾಪ್ತಿಯಾಗುವ ಗೆಲುವೇ ಹೆಚ್ಚು ಆನಂದವನ್ನು ನೀಡುತ್ತದೆ.

41. ಒಬ್ಬ ವ್ಯಕ್ತಿಯು ಪ್ರಸಿದ್ಧಿಗೆ ಬರುವುದು ಮುಖ್ಯವಲ್ಲ. ಅತ ಗಳಿಸಬಹುದಾದ ಪ್ರಸಿದ್ಧಿತನವನ್ನು ತನ್ನ ಜೀವಿತದ ಕೊನೆಯ ಅವಧಿಯ ತನಕವೂ ಉಳಿಸಿಕೊಳ್ಳುವಂತಾದಾಗಲೇ ಸಾರ್ಥಕತೆ ಪ್ರಾಪ್ತಿಯಾಗುತ್ತದೆ.

42. ಮಾನವನ ಆಧ್ಯಾತ್ಮ ಸಾಧನೆಗಳಿಗೆ ಇತಿಹಾಸದ ಹಿನ್ನಲೆ ಇದೆ; ಮಾನವನ ವೈಜ್ಞಾನಿಕ ಸಾಧನೆಗಳಿಗೆ ಪ್ರಸಕ್ತ ಪೀಳಿಗೆಯು ನಾವುಗಳು ಹಿನ್ನೆಲೆಯನ್ನು ರೂಪಿಸಿಕೊಳ್ಳಬೇಕಾಗಿದೆ.

43. ಮನುಷ್ಯನ ಜ್ಞಾನ ಅಪೂರ್ಣವಾಗಿರುವ ತನಕವೂ ವಿಜ್ಞಾನವೂ ಅಪೂರ್ಣವೆ!

44. ತನಗೆ ಯಾರೂ ಪ್ರೋತ್ಸಾಹ ನೀಡುತ್ತಿಲ್ಲ ಎಂದು ಹವಣಿಸುವವ ತಾನೆಷ್ಟರ ಮಟ್ಟಿಗೆ ಅನ್ಯರನ್ನು ಪ್ರೋತ್ಸಾಹಿಸುತ್ತಿದ್ದೇನೆಂದು ತನ್ನ ವ್ಯಕ್ತಿತ್ವವನ್ನು ವಿಮರ್ಶಿಸಿಕೊಂಡರೆ ಆತನ ದೌರ್ಬಲ್ಯದ ಮನದಟ್ಟಾಗುತ್ತದೆ.

45. ವಿಜ್ಞಾನಿಗಳಿಗೆ ಪ್ರೋತ್ಸಾಹ ನೀಡದ ದೇಶ ಎಷ್ಟು ಶತಮಾನಗಳಾದರೂ ಪ್ರಗತಿಯನ್ನು ಹೊಂದದು.

46. ಮೌನ ಹಿರಿಯರಿಗೆ ಶೋಭಿಸುವಂತೆ, ಲವಲವಿಕೆ ಕಿರಿಯರಿಗೆ ಶೋಭಿಸುತ್ತದೆ.

47. ಗಡಿಯಾರದ ಮುಳ್ಳು ಮುಂದೆ ಚಲಿಸಿದಂತೆ ನಮ್ಮ ಜೀವಿತದ ಆಯುಷ್ಯದಲ್ಲಿನ ಆ ಸಮಯ ವ್ಯವಕಲನವಾಗ ತೊಡಗುತ್ತದೆ.

48. ಮಾನವ ಮನುಷ್ಯತ್ವಕ್ಕೆ ತಕ್ಕಂತೆ ನಡೆದು ತೋರಬೇಕೆ, ವಿನಃ ನುಡಿದು ತೋರುವುದಲ್ಲ.

49. ಕೇವಲ ಮನೋಭಾವದಿಂದ ಪರೋಕ್ಷವಾಗಿ ಸಹಕರಿಸಿದ್ದನ್ನು ಕ್ಲಿಷ್ಟ ಸಮಯಗಳಲ್ಲೂ ಪ್ರತ್ಯಕ್ಷವಾಗಿ ಪ್ರಶ್ನಿಸಲಾಗದು ಇದು ಪರಸ್ಪರ ಸೂಕ್ತ ಅರಿವಿನಿಂದ ಮಾತ್ರ ಬಗೆಹರಿತಗೊಳ್ಳಬೇಕಾಗಿದೆ.

50. ಮನರಂಜನೆಯು ಸಮಯ ಸಾಧಕತನಕ್ಕೆ ಪೂರಕವಾದ ಮಾಧ್ಯಮ-ವಾಗಿ ಬೆಳೆಯದೆ ಪ್ರಚಲಿತ ವಿಚಾರಗಳ ಮಂಥನಕ್ಕೆ ಜನತೆಯನ್ನು ಆಕರ್ಷಿಸು-ವಂತಿರಬೇಕು.

51. ದೈಹಿಕ ಖಾಯಿಲೆಗಳನ್ನು ಗುಣಪಡಿಸಲು ವೈಜ್ಞಾನಿಕ ವೈದ್ಯರು-ಗಳಿರುವಂತೆ; ಮಾನಸಿಕ ಖಾಯಿಲೆಗಳನ್ನು ಗುಣಪಡಿಸಲು ತತ್ತ್ವ ಜ್ಞಾನಿ-ಗಳಿರುತ್ತಾರೆ.

52. ಆರ್ಥಿಕವಾಗಿ ಪ್ರಗತಿ ಪರಳಾಗದೆ ಹೆಣ್ಣು ಪುರುಷ ಪ್ರಧಾನ ಸಮಾಜದ ಶೋಷಣೆಗಳಿಂದ ಮುಕ್ತಳಾಗಲಾಗದು.

53. ನಿರಂತರ ಸೋಲುಗಳು ಆತ್ಮ ವಿಶ್ವಾಸವನ್ನು ಕುಗ್ಗಿಸುವಂತೆ, ನಿರಂತರ ಗೆಲುವುಗಳು ಗರ್ವವನ್ನು ಹೆಚ್ಚಿಸುತ್ತವೆ.

54. ಜೀವನವನ್ನು ಉಳಿಸಿಕೊಳ್ಳುವುದಷ್ಟೇ ಮೂಕ ಜೀವಿಗಳ ಹೋರಾ-ಟವಾಧಂತಿದೆ. ಆಲೋಚನಾ ಸಾಮರ್ಥ್ಯದಿಂದ ವಂಚಿತವಾದ ಮೂಕ ಜೀವಿಗಳು ತಮ್ಮ ಜೀವಿತವನ್ನು ಸಾರ್ಥಕ ಪಡಿಸಿಕೊಳ್ಳುವ ಪ್ರಶ್ನೆಯೇ ಉದ್ಭವಿಸದು.

55. ಸ್ಪರ್ಧೆಯು ಜೀವನದಲ್ಲಿಲ್ಲವಾಗಬೇಕಾದರೆ ಸ್ವಾರ್ಥವು ಜೀವನದಲ್ಲಿಲ್ಲ-ವಾಗಬೇಕು.

56. ಗರ್ವಿಷ್ಟನಿಗೆ ಶಿಕ್ಷೆಯಾದಾಗ ಪರಿತಪಿಸಬೇಕಾಗಿಲ್ಲ, ಆದರೆ ಸೌಜನ್ಯ ಶೀಲ ವ್ಯಕ್ತಿಗೆ ಅನ್ಯಾಯವಾದಾಗ ಪ್ರತಿಭಟಿಸಬೇಕು.

57. ದೋಷ ತಪ್ಪತೆಗಳಿಂದ ಕೂಡಿರುವ ಸಮಾಜಗಳಲ್ಲಿ ದೋಷಗಳನ್ನು ತಿದ್ದುವುದು ಮಹಾನ್ ಸಾಧನೆಯೆಂದೆನಿಸಿಕೊಳ್ಳುವುದಿಲ್ಲ.

58. ಯೋಜನೆಯ ನಿರೂಪಣೆಯ ಹಿನ್ನೆಲೆಯಲ್ಲಿ "ಯೋಜನಾ ತಂಮೂಲತೆ ಇರುವಂತೆ; ಸಾಧನೆಯ ಹಿನ್ನೆಲೆಯಲ್ಲಿ ಯೋಜನೆಗಳ ಸ್ವರೂಪವಿರುತ್ತದೆ.

59. ಯೌವನವನ್ನು ತ್ಯಾಗ ಮಾಡಬಲ್ಲದಂತಹ ಸಾಮರ್ಥ್ಯ ಇರುವವರಿಂದಲೇ ಯಾವುದೇ ಬಗೆಯ ಕ್ರಾಂತಿಯಾಗಲಿ ಸಾಧ್ಯವಾಗಬಲ್ಲದಾಗಿದೆ.

60. ಹಿರಿಯರ ನಡುವೆ ಕಿರಿಯನಾಗಿ; ಕಿರಿಯರ ನಡುವೆ ಹಿರಿಯನಾಗಿ ಮಾನವ ಬದುಕುವುದನ್ನು ಕಲಿಯಬೇಕಾಗಿದೆ.

61. "ಜಾತಿ" ಯೆನ್ನುವುದು ಅನಾಗರೀಕ ಜನತೆ ಈ ವಿಶ್ವಕ್ಕೆ ನೀಡಿದ ಕರಾಳ ಕೊಡುಗೆಯಾಗಿದೆ.

62. ಅಂಧಾನು ಕರಣೆಗಳಿರುವಲ್ಲಿ ಧಾರ್ಮಿಕ ಶೋಷಣೆ ತಪ್ಪುವುದಿಲ್ಲ.

63. ಜಗತ್ತಿನಲ್ಲಿ ರಾಜಕೀಯ ಸ್ವಾತಂತ್ರ್ಯ ಸಂಗ್ರಾಮಗಳ ಬಹುತೇಕ ಎಲ್ಲಾ ಹೋರಾಟಗಳೂ ಬಹುಶಃ ಸಮಾಪ್ತಿಯಾಗಿದ್ದು, ಆರ್ಥಿಕ ಹಾಗೂ ನೈತಿಕ ಮೌಲ್ಯಗಳ ಅಂದ:ಪತನದ ವಿರುದ್ಧದ ಹೋರಾಟಗಳು ಈಗೀಗ ಆರಂಭಗೊಳ್ಳುವಂತಿವೆ!

64. ಗ್ರಂಥಾಲಯಕ್ಕಿಂತ ಅತಿದೊಡ್ಡ ಅಧ್ಯಯನಾಲಯ ಮತ್ತೊಂದಿಲ್ಲ: ಪ್ರಕೃತಿಗಿಂತ ದೊಡ್ಡ ಅತ್ಯೀಯಾಲಯ ಮತ್ತೊಂದಿಲ್ಲ.

65. ಅತಿಥಿ ಸತ್ಕಾರವು ವ್ಯಕ್ತಿಯೊಬ್ಬನ ವ್ಯಕ್ತಿತ್ವದ ಸಹನೆಯನ್ನು ಪರೀಕ್ಷಿಸುವಂತಹದಾಗಿದೆ. ಅತಿಥಿಗಳನ್ನು ಆಹ್ವಾನಿಸುವವ ಎಷ್ಟೊಂದು ಆದರತೆಯಿಂದ ವರ್ತಿಸುತ್ತಾನೋ, ಅತಿಥಿಯಾದವನೂ ಸಹ ಅಷ್ಟೇ ಕೃತಜ್ಞಭರಿತನಾಗಿ ವರ್ತಿಸುವಂತಾಗಬೇಕು.

66. ಕ್ರಿಯಾ ಕ್ಷಮತೆ ಪ್ರವರ್ಧಮಾನವಾಗಿ ಜನತೆಯಲ್ಲಿ ಹೆಚ್ಚದ ಹೊರತಾಗಿ ಕ್ರಿಯಾಶೀಲ ಕ್ಷೇತ್ರಗಳಲ್ಲಿ ಬದಲಾವಣೆಗಳಾಗದು.

67. ಯಾವ ಉದ್ದೇಶಕಾಗಿ ಮನುಸಂಕುಲ ಬದುಕಲಿಚ್ಛಿಸಿದೆಯೋ ಆ ಉದ್ದೇಶವನ್ನರಿಯುವ ತನಕವೂ ತನ್ನ ಅಸ್ತಿತ್ವವನ್ನು ಮೊದಲು ಉಳಿಸಿಕೊಳ್ಳಬೇಕಾಗಿದೆ. ಅನಂತರ ಮುಂದಿನ ಪ್ರಶ್ನೆಯ ಪರಿಹಾರಕ್ಕೆ ಪ್ರಯತ್ನಿಸಬಹುದಾಗಿದೆ.

68. ಸಹವಾಸ-ಅಭ್ಯಾಸ-ಪ್ರವಾಸಗಳಿಂದ ಅನುಭವವು ಹೆಚ್ಚುತ್ತದೆ.

69. ಈ ಜಗತ್ತಿಗೆ ಬರೀ ಕೈಯಲ್ಲಿ ಬಂದ ಮಾನವ ದೇಹಗಳು ಇದು-ನನ್ನದು, ಅದು-ನಿನ್ನದು ಎನ್ನುವುದರಲ್ಲಿ ಏನು ಅರ್ಥವಿದೆ? ಮಾನವ ಕೇವಲ "ಪ್ರಕೃತಿ" ಪರಿಕರಗಳ ಪರಿವರ್ತಿತನೇ ವಿನಃ ಉಗಮತೆಯ ಕರ್ತೃವಲ್ಲ.

70. ಆದರ್ಶತೆಯ ನಿಟ್ಟಿನಲ್ಲಿ ಅಚ್ಚಳಿಯದೆ ಸ್ಥಿರವಾಗಿ ಹೃದಯಂತರಾಳದಲ್ಲಿ ಮುದುಗುವ ಅನುಭವಾತ್ಮಕ ಸದ್ವಿಚಾರಗಳೇ ವ್ಯಕ್ತಿಯೊಬ್ಬನನ್ನು ನೈತಿಕ ಪಥದಲ್ಲಿ ಕ್ರಿಯಾ ನಿರತನಾಗಿಸಿ ಮಾರ್ಗದರ್ಶಿಸಬಲ್ಲವಾಗಿವೆ.

71. ಸಂತೋಷದ ಗರಿಷ್ಟತೆ-ಆತ್ಮೀಯತಾ ಆನಂದವಾಗಿದ್ದರೆ; ದುಃಖದ ಗರಿಷ್ಟತೆ-ವೈರಾಗ್ಯ ತಪ್ತ ಕಣ್ಣೀರಷ್ಟೇ ಆಗಬಲ್ಲದಾಗಿದೆ.

72. ಮಾನವನು ಅನುದಿನವೂ ಹಂಬಲಿಸುವ ಅಪೇಕ್ಷೆಗಳ ಸಾಫಲ್ಯೀಕರಣದ ತೃಪ್ತಿಯನ್ನು ದೀರ್ಘಕಾಲ ಸಂರಕ್ಷಿಸಿಕೊಳ್ಳಲಾಗದು.

73. ಭಿನ್ನಾಭಿಪ್ರಾಯಗಳು ಮನೆಗಳನ್ನು ಮುರಿಸಿವೆ, ದೇಶಗಳನ್ನು ಒಡೆಸಿವೆ, ಈಗ ಜಗತ್ತನ್ನೇ ನಾಶದಂಚಿನಲ್ಲಿ ನಿಲ್ಲಿಸಿವೆ. ಅದ್ದರಿಂದ ಭಿನ್ನಾಭಿಪ್ರಾಯಗಳು ಇರುವ ತನಕವೂ ಮನುಷ್ಯ ನೆಮ್ಮದಿಯಾಗಿರಲಾರ.

74. ಯಾವುದೇ ಕ್ಷೇತ್ರದಲ್ಲೇ ಆಗಲಿ ಪ್ರಚಾರಗಳಿಗೆ ಸಿಗದೆ, ಕೀರ್ತಿ ಆಡಂಭರಗಳಿಗೆ ಒಳಗಾಗದೆ ಜವಾಬ್ದಾರಿಯರಿತು ಸೇವೆ ಸಲ್ಲಿಸುವವರೇ ಸಾರ್ಥಕರಾದ ಸಾಮಾಜಿಕ ಸೇವಾಕರ್ತರಾಗಿರುತ್ತಾರೆ.

75. ವ್ಯವಹಾರಿಕ ಜಗತ್ತಿನಲ್ಲಿ ನಿರತನಾಗಿರುವ ಮಾನವ ಸಾವು ತನಗಿದೆಯೆಂಬುದನ್ನೇ ಮರೆತು ತಾನು ಶಾಶ್ವತನೆಂಬಂತೆ ವರ್ತಿಸುತ್ತಿದ್ದಾನೆ-ಅಷ್ಟರ ಮಟ್ಟಿಗೆ ಸ್ವಾರ್ಥತೆ ಅಡಗಿದೆ.

76. ಇಂದಿನ ಜಗತ್ತು ತ್ವರಿತ ಬೆಳವಣಿಗೆಯನ್ನು ಕಾಣುವಲ್ಲಿ ಬಹಳಷ್ಟು ಕಡಿಮೆ ಮಂದಿಯ ವಿಶಿಷ್ಟ ಕೊಡುಗೆಗಳೇ ಕಾರಣೀಕೃತವಾಗಿವೆ.

ಅದೇ ಬಗೆ ನುಂಡಿಯಿಂದ ಭಾಗಶಃ ಗೀತೆ ಹಿನ್ನೂರ್ಡಮಯವಾಗಿ ನಾಸ್ತಿ-ಕಾಗುವುದಾದರೆ ಈ ಜಗತ್ತು ನುತ್ತಷ್ಟು ಸೊಬಗಿನಿಂದ ಕಂಗೊಳಿಸಬಲ್ಲದಾಗಿದೆ.

77. ಸಂಪ್ರದಾಯಗಳ ಕೋಗುಗಳನ್ನು ಕಿವಿಯಿಂದ ಆಲಿಸುವ ಕಾರ್ಯಜನಕರು ಆನಂದವನ್ನು ಹೊಂದುವುದಕ್ಕಿಂತ ಸ್ವೇಚ್ಛಾಶೀಲ ವಿಚಾರಗಳನ್ನು ಕೇಳುತ್ತಮಯವಾಗಿ ಧ್ಯಾನದಲ್ಲಿ ಅವಕಾಶವಾಗುವರು ಏಕೆ ಆಸಕ್ತಿಯುಳ್ಳ-ರಾಗಬಾರದು?

78. ಅಸಾಧ್ಯವಾದವುಗಳನ್ನು ಸಾಧ್ಯಗೊಳಿಸುವ ಪ್ರಿಯತಲ್ಲಿ ವಿಜ್ಞಾನವು ಇಲ್ಲ. ಅಸಾಧ್ಯವೆಂಬುದು ಮನುಷ್ಯನ ಜ್ಞಾನೇಂದ್ರಿಯಗಳಿಗಷ್ಟೇ ಸೀಮಿತವಾಗಿದ್ದು ವಿಜ್ಞಾನವು ನಿಶ್ಚಯವಾಗಿ ಶಾಸ್ತ್ರೀಯತೆ ಪರಿಶೋಧನೆಯಾದ ಸಾಧ್ಯವಾಗಿದೆ.

79. ಇಂದಿನ ನಾಗರಿಕ ಜಗತ್ತಿನಲ್ಲಿ ಆಧುನಿಕವಾಗಿ ಸ್ವಾತಂತ್ರ್ಯಗೊಂಡಿರುವ ಪತ್ರಿಕಾದಂಗಳೇ ಬರುವೇ ಜನರನ್ನು ನಾಯಕ್ಯಗಳಿಗೆ ಕಾಣಿಕೆ ನೀಡುವ ವ್ಯಕ್ತಿಯಲ್ಲಿ ಆತನ ಭಾಗದಿಂದ ಅಂತಿಮ ಹಿತಕ್ಕಾಗಿ ಅಪ್ಪಣೆಯ ಜಿಡ್ಡೆ ಗಳ ಗಳಿಗಾಗಿ ಕೆಲಸ ಮಾಡುತ್ತಿರುವುದು ಇದಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ.

80. ಆಧುನಿಕ ಧಾರ್ಮಿಕ ವ್ಯಕ್ತಿಗಳಲ್ಲಿ ಅವರ ಸಂಸ್ಕೃತಿಯ ಹಿತಾಸಕ್ತಿಯು ಕೇವಲ ಪಾರಿಭಾಷಿಕವಾಗಿ ಉಳಿದಿದೆ. ಅವರು ಅವೈಜ್ಞಾನಿಕ ಸಂಕುಚಿತನದ ಗುಣಗಳನ್ನು ಇವರು ಹೊಂದಿರುತ್ತಾರೆ.

81. ನ್ಯಾಯವಾಗಿ ಮತ್ತು ಕ್ರಮಬದ್ಧವಾಗಿರುವ ಜೀವನ, ಭಾವನಾತ್ಮಕವಾಗಿ ಶಕ್ತಿಯುತ ವಿಚಾರಗಳ ಶಿಸ್ತುಬದ್ಧವಾಗಿರುವುದು ಅವನ ಆಧ್ಯಾತ್ಮಿಕ ಮನಸ್ಥಿತಿಯ ಆಧಾರವನ್ನು ತೋರಿಸುತ್ತದೆ.

82. ಜಗತ್ತಿನಲ್ಲಿ ಬಿಸ್ತು ಸ್ವಾರ್ಥದ ಅಂಧಕಾರದಿಂದ, ಸಾಹಸ ಹೃದಯದ ಪ್ರಾಮಾಣಿಕತೆ ಹೆಚ್ಚಾಗಿದೆ.

83. ಸ್ವಾತಂತ್ರ್ಯ ಸಾಧನೆಗಳಿಗಿಂತ ಶ್ರಮ ಶಿಸ್ತು ಸಂಯಮಗಳು ಜಗತ್ತಿನಲ್ಲಿ ಹೆಚ್ಚು ಶ್ರೇಷ್ಠವಾದ ಪ್ರಭಾವವನ್ನು ಬೀರುತ್ತವೆ.

84. ತನ್ನ ಮಕ್ಕಳೆಲ್ಲರ ಅಂತಃಕರಣವನ್ನು ಬಲ್ಲ ತಾಯಿಯ ಅಂತಃಕರಣವನ್ನು ಅರಿಯುವಂತಹ ಮಕ್ಕಳು ಜಗತ್ತಿನಲ್ಲೇ ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ.

85. ಮಾನವ ತನ್ನ ದೈನಂದಿನ ಜೀವಿತದಲ್ಲಿ ಬಳಸುವಂತಹ ಪದಗಳು, ವ್ಯಾಕರಣಗಳು, ಭಾಷಾ ಪಾಂಡಿತ್ಯಗಳೆಲ್ಲಾ ಕಾಲಾಂತರದಲ್ಲಿ ಆತನಿಂದ ಸ್ವೀಕೃತಗೊಂಡಿರುವಂತಹುದೇ ವಿನಃ ದೈವದತ್ತ ಕೊಡುಗೆಗಳೇನಲ್ಲ.

86. ಮಾನವನು ವಿಷಯಜ್ಞಾನವನ್ನು ಅಂತಃಕರಣದಲ್ಲಿ ಪಕ್ವಪಡಿಸಿಕೊಳ್ಳದೆ ವಿಷಯ ತರ್ಕತೆಯಲ್ಲಿ ಸ್ವಾಮ್ಯ ಹೊಂದಲಾಗದಾಗಿದೆ.

87. ನಿಷ್ಪ್ರಯೋಜಕ ವಿಚಾರಗಳೆಡೆಗೆ ಮಾನವನು ಗಮನವನ್ನು ನೀಡುವಂತೆ ದೀರ್ಘ ಪ್ರಭಾವವನ್ನು ಬೀರಬಲ್ಲದಂತಹ ಮೌಲಿಕ ವಿಚಾರಗಳೆಡೆ ಗಮನನೀಡದಿರುವುದು ಶೋಚನಿಯವಾಗಿದೆ.

88. ಸಮಾಜದ ಒಬ್ಬ ವ್ಯಕ್ತಿಯಿಂದಾದ ಅನ್ಯಾಯಕ್ಕಾಗಿ ಇಡೀ ಸಮಾಜದ ವಿರುದ್ಧ ಸೇಡಿನ ಕಿಡಿ ಕಾರುವವನು-ಸಂಕುಚಿತ ಪ್ರವೃತ್ತಿಯುಳ್ಳವನಾಗಿರುತ್ತಾನೆ.

89. ಸಾಮಾಜಿಕ ಸಾಧನೆಗಳಲ್ಲಿ ವ್ಯಕ್ತಿಗತ ಪ್ರತಿಷ್ಠೆಯ ಹೋಲಿಕೆಗಳ ಸ್ಪರ್ಧೆಯೇ ಭವಿಷ್ಯದಲ್ಲಿ ಅತ್ಯುಗ್ರ ಸಮಸ್ಯೆಯಾಗಿ ಮನಸಂಕಟವನ್ನು ಪೇಚಿಗೀಡು ಮಾಡಬಲ್ಲದಾಗಿದೆ.

90. ನೇರ ತರ್ಕತೆ, ಶಿಸ್ತುಗಳೆಡೆಗೂ ನಮ್ಮ ಜೀವಿತದಲ್ಲಿ ರಾಸು ದೊಕ್ಕಾಗುವುದಾದರೆ ವ್ಯರ್ಥಗೊಳ್ಳಬಹುದಾದ ಬಹಳಷ್ಟು ಸಮಯವನ್ನು ಸದುಪಯೋಗಿಸಿಕೊಳ್ಳಬಹುದಾಗಿದೆ.

91. ವಿಶ್ವದ ಅಸ್ತಿತ್ವಕ್ಕೆ ಯಾರೊಬ್ಬರು ಅನಿವಾರ್ಯರಲ್ಲ, ವಿಶ್ವದ ಬಾಹ್ಯ ಮಾನದಂಡಗಳಿಗಷ್ಟೇ ಸಹಕರಿತರಾಗಬಹುದು ಆದರೆ ಜಗತ್ತಿನ ಯಾವೊಂದು ಬಾಹ್ಯ ಮಾನದಂಡವೇ ಆಗಲಿ ನಿರಂತರ ಬದಲಾವಣೆಗಳಿಗೆ ಒಳಗಾಗುತ್ತಲೇ ಇರುತ್ತದೆ.

92. ನಮ್ಮ ದಿನನಿತ್ಯದ ಜೀವಿತದಲ್ಲಿ ನಿರಾಶೆಗೆ ಸ್ಥಾನ ಸಿಕ್ಕಿದಾದರೆ ಅದು ಆಸಕ್ತಿಯನ್ನು ಕುಗ್ಗಿಸುತ್ತದಲ್ಲದೆ, ಸ್ಫೂರ್ತಿಯನ್ನೂ ಕಮರಿಸುತ್ತದೆ. ಆದ್ದರಿಂದ ಸದಾ ಆಶಾವಾದಿ ಮನೋಭಾವ ನಮ್ಮಗಳಲ್ಲಿರಬೇಕು.

93. ಸಕ್ರಿಯ ಜೀವಿತದಲ್ಲಿ ವ್ಯಕ್ತಿಯೊಬ್ಬ ವಾಸ್ತವಿಕತೆಗಳನ್ನು ಕಾಣ-ಬೇಕಾದರೆ ಆತನ ಅನುಭವದ ವೃದ್ಧಿಗೆ ಇರಬಹುದಾದ ಅವಕಾಶಗಳು ಸಹಕಾರಿಯಾಗಬಹುದಾಗಿದ್ದು ಅವುಗಳ ಸದುಪಯೋಗದ ಮುಖೇನವೇ ಸೃಜನಶೀಲ ಮಸ್ತಿಷ್ಕ ಅರಿವನ್ನು ವ್ಯಕ್ತಪಡಿಸಬಲ್ಲದಾಗಿದೆ.

94. ದೇಶ-ದೇಶಗಳ ನಡುವೆ ಆತ್ಮೀಯತಾ ಅನುಬಂಧ ಸಂಘಟಿತ-ಗೊಳ್ಳುವುದಾದರೆ ಜಗತ್ತಿನಲ್ಲಿ ಮಾರಕಾಸ್ತ್ರಗಳಿಗೆ ಸ್ಥಾನವೇ ಇರುವುದಿಲ್ಲ. ಇದಕ್ಕಾಗಿ ಅನೈತಿಕ ದುಷ್ಟ-ಪ್ರವೃತ್ತಿಗಳ ನಿರ್ಮೂಲನ ಜಾಗತಿಕ ಹಿತಚಿಂತಕ-ರಿಂದಾಗಬೇಕಾಗಿದೆ.

95. ತನ್ನ ತನದ ಬಗ್ಗೆ ಆತ್ಮ ವಿಶ್ವಾಸವಿಲ್ಲದವನಿಗೆ ಈ ಜಗತ್ತು ಜಿಗುಪ್ಸಿತವಾಗಿ ಗೋಚರಗೊಳ್ಳುತ್ತದೆ.

96. ತಮ್ಮ ದೋಷಗಳನ್ನು ತಿದ್ದಿಕೊಳ್ಳದೆ ಮತ್ತೊಬ್ಬರ ದೋಷಗಳನ್ನು ಕಂಡುಹಿಡಿದು ಬುದ್ಧಿವಂತರೆಂದೆನಿಸಿಕೊಳ್ಳುವವರು ಬುದ್ಧಿವಂತ ರೂಪದ ದಡ್ಡ-ರಾಗಿರುತ್ತಾರೆ.

97. ದೈವ ಭಕ್ತಿ ಹೆಚ್ಚಾಗಿರುವವರಲ್ಲಿ ಕಲುಷಿತ ದೃಷ್ಟಿಗಳಿಗೆ ಕಿಂಚಿತ್ತೂ ಆಸ್ಪದಗಳಿರದು. ಒಂದು ವೇಳೆ ಆಸ್ಪದಗಳಿದ್ದಲ್ಲಿ ಅವರು ದೈವ ಭಕ್ತರೆಂದೆನಿಸಿ-ಕೊಳ್ಳಬಾರದು.

98. ಜ್ಞಾನಾರ್ಜನೆ, ಸಂಚಿಕೆ ಇವೆರಡೂ ಪರಸ್ಪರ ಅವಲಂಬಿಗಳಾಗಿವೆ.

99. ಗಳಿಸಿಕೊಂಡ ಅನುಭವವನ್ನು ಜೀವಿತದ ಮುಂದಿನ ಸಮೃದ್ಧಿಯ ಬಾಳ್ವೆಗೆ ಸದುಪಯೋಗ ಪಡಿಸಿಕೊಳ್ಳಬೇಕೇ ವಿನಃ ಪ್ರತಿಷ್ಠೆಯಿಂದ ಮೆರೆಯುವಿಕೆ ಉಪಯೋಗಿಸಿಕೊಳ್ಳಬಾರದು.

100. ವಿಶ್ವದ ಒಳಿತಿಗೆ ತನ್ನನ್ನು ಸಮರ್ಪಿಸಿಕೊಳ್ಳುವವನೇ ಮಾನ-ವೀಯತಾವಾದಿಯಾಗಿರುತ್ತಾನೆ.

101. ಸ್ವತಂತ್ರ್ಯ ವ್ಯಕ್ತಿತ್ವವನ್ನು ನಿರೂಪಿಸಿಕೊಳ್ಳದವ ಗುರಿಯನ್ನಿ-ಸಿಕೊಳ್ಳಲಾಗುವುದಿಲ್ಲ.

102. ಸಹಬಾಳ್ವೆ ಇಲ್ಲದೆ ಮಾನವನು ಒಂದು ದಿನವೂ ನಾಗರೀಕನಾಗಿ ಬಾಳಲಾಗುವುದಿಲ್ಲ.

103. ಮೊದಲು ತನ್ನ ಜೀವಿತವನ್ನು ನಿರೂಪಿಸಿಕೊಳ್ಳಲು ಹೆಣಗಾಡು-ವವನು ಸಾವಿರಾರು ಮಂದಿಯ ಜೀವಿತ ನಿರೂಪಣೆಗೆ ಹೇಗೆ ತಾನೆ ಸಹಕಾರಿಯಾಗಬಲ್ಲನು?

104. ಜಾಗತೀಕ ಸೃಷ್ಟಿಯಲ್ಲಿ ಪ್ರತಿಭೆಗಳ ಸಂಗಮವಾಗುವುದಾದರೆ ಗಹನವಾದ ವಿಚಾರಗಳೂ ಸಹ ಮನುಸಂಕುಲಕ್ಕೆ ಅಲ್ಪವಾಗಿ ಕಂಡು ಬರಬಹುದಾಗಿದೆ.

105. ಸಾರ್ವಕಾಲಿಕ ಸತ್ಯಗಳನ್ನು ವಿಮರ್ಶಕ ದೃಷ್ಟಿಯಿಂದ ವಿವೇಚಿಸ-ಲಾಗದು. ಕಾರಣ ಪೀಳಿಗೆಗಳಂತರದಲ್ಲಿ ಅವು ಪ್ರತಿಪಾದಿತಗೊಂಡಿರುತ್ತವೆ.

106. ಮಾನವನಲ್ಲಿ ಬೆಳೆದು ಬರುತ್ತಿರುವ ಗುಂಪುಗಾರಿಕೆಗಳಿಗೆ ಹಿಂದಿನಿಂದಲೂ ಉಳಿದು ಬಂದಿರುವ ಸಾಮೂದಾಯಿಕ ಪ್ರಜ್ಞೆಯೇ ಕಾರಣೀ-ಕೃತವಾಗಿದೆ.

107. ಆಹ್ಲಾದಮಯ ಮನದಿಂದ ಆತ್ಮ ತೃಪ್ತಿಯನ್ನು ಪಡೆಯಬಹು-ದಾಗಿದೆ. ಆದರೆ ಹಣದಿಂದ ವಸ್ತು ತೃಪ್ತಿಯನ್ನಷ್ಟೇ ಪಡೆಯಲು ಸಾಧ್ಯ-ವಾಗಬಹುದು.

108. ಇತಿಹಾಸವನ್ನು ನಾವು ಗೌರವಿಸದಿದ್ದರೆ ನಮ್ಮನ್ನು ಮುಂದಿನ ಪೀಳಿಗೆಯು ಗೌರವಿಸಲಾರದು. ಕಾರಣ ಆಗ ನಾವು ಅವರಿಗೆ ಇತಿಹಾಸವಾಗಿ ಕಂಡು ಬರುತ್ತೇವೆ.

109. ಇತಿಹಾಸದ ಸಾರ್ಥಕ ಸಾಧನೆಗಳನ್ನು ಸದುಪಯೋಗ ಪಡಿಸಿ-ಕೊಳ್ಳದಿದ್ದರೆ ಐತಿಹಾಸಿಕ ಪ್ರಭಾವದ ಸ್ಫೂರ್ತಿಯಿಂದ ನಾವು ವಂಚಿತರಾದಂತೆಯೇ ಸರಿ.

110. ಸುವ್ಯವಸ್ಥಿತ ಮಟ್ಟಕ್ಕೆ ನಾವು ಬರುವಂತಾಗಬೇಕಾದರೆ ದುರ್ವ್ಯವಸ್ಥಿತ ಮಟ್ಟವನ್ನು ಪೂರ್ಣವಾಗಿ ತಿರಸ್ಕರಿಸಲೇಬೇಕು.

111. ಪರಮಾಣುವನ್ನು ನೀಡಿರುವ ವಿಜ್ಞಾನವು ಅದರೊಂದಿಗೆ ಪರಮಾಣು ಅಸ್ತ್ರಗಳನ್ನು ನೀಡಿರುವುದು ವಿಸ್ಮಯಕಾರಿಯಾಗಿದೆ.

112. ಮನುಷ್ಯ ಸೇಡಿಗೆ-ಸೇಡು, ರಕ್ತಕ್ಕೆ-ರಕ್ತವೇ ಪರಿಹಾರವೆನ್ನುವ-ದಾದರೆ ರಕ್ತದ ಕೋಡಿ ಹರಿಯುತ್ತದೆ. ಶಾಂತಿಯಿಂದ-ಶಾಂತಿಯೆನ್ನುವುದಾದರೆ ಎಲ್ಲೆಡೆಗಳಲ್ಲೂ ಶಾಂತ ಚಿತ್ತತೆ ಪಸರಿಸುತ್ತದೆ.

113. ಯಾವ ಸಂದರ್ಭದಲ್ಲೇ ಆಗಲಿ ಯಾವ ಸರ್ಕಾರಗಳೇ ಆಗಲಿ ಶಕ್ತಿಯುತ ಹತೋಟಿಯಿಂದ ಆಳಲಾಗದು, ಯುಕ್ತಿಯುತ ಚಟುವಟಿಕೆಯಿಂದ ಮಾತ್ರ ಜನತೆಯನ್ನು ಆಳಬಹುದಾಗಿದೆ.

114. ವಿದೇಶಗಳ ಬಗ್ಗೆ ಹೆಚ್ಚು ಹೆಚ್ಚು ಅರಿತಂತೆಲ್ಲಾ ಸ್ವದೇಶದ ಬಗ್ಗೆ ಹೆಚ್ಚು ಮರೆಯುವುದು ಪ್ರತಿಭಾವಂತರ ದೌರ್ಬಲ್ಯವಾಗಿದೆ.

115. ವರ್ಣನೆಯಲ್ಲಿ, ವಿಮರ್ಶೆಯಲ್ಲಿ, ರಾಜಕೀಯದಲ್ಲಿ, ಕ್ರೀಡೆಯಲ್ಲಿ ಯಾವೊಬ್ಬ ವ್ಯಕ್ತಿಯೂ ಅವ್ಯಾಹತವಾಗಿ ಸಾರ್ವಭೌಮತ್ವವನ್ನು ಪಡೆಯ-ಲಾಗುವುದಿಲ್ಲ.

116. ನಂಬಿಕೆ ದ್ರೋಹದ ಬಗ್ಗೆ ಜನರಲ್ಲಿ ಸಂಶಯಗಳು ಸಾರ್ವ-

ವಸ್ಥೆಯಲ್ಲಿರುವುದರಿಂದಲೇ ಸಹಕಾರಿ ಮನೋಭಾವವು ಕಡಿಮೆ ಪ್ರಮಾಣದಲ್ಲಿದೆ.

117. ಜಡತನದಲ್ಲಿ ಬಾಳುವ ಮನುಷ್ಯ ತನ್ನ ಜೀವಿತದ ಅಧಿಕ ಸಮಯವನ್ನು ಆಲೋಚಿಸುವುದಕ್ಕಿಂತ ಹೆಚ್ಚಾಗಿ ಚಿಂತಿಸುವುದರಲ್ಲೇ ಕಳೆದುಬಿಡುತ್ತಾನೆ.

118. ತಮ್ಮ ಪ್ರತಿಭೆಯನ್ನು ಸಮಾಜದಲ್ಲಿ ಕ್ರಿಯಾಶೀಲವಾಗಿ ಪ್ರದರ್ಶಿಸದೆ ಸಮಾಜವು ತಮ್ಮನ್ನು ಗುರ್ತಿಸುತ್ತಿಲ್ಲವೆಂದು ವ್ಯಥೆಪಡುವುದು ಸರಿಯಲ್ಲ.

119. ಪ್ರಕೃತಿಯ ಪ್ರತಿರೂಪವನ್ನು ಭಾವನೆಗಳಿಂದ ವೀಕ್ಷಿಸಿದಂತೆಲ್ಲಾ ಅಂತಃಕರಣದಲ್ಲಿ ಆತ್ಮೀಯತೆ ಉಕ್ಕಿ-ಉಕ್ಕಿ ಬರುತ್ತವೆ.

120. ಕೀರ್ತಿಗಾಗಿ ಹಂಬಲಿಸುವವರೇ ಹೆಚ್ಚಾಗಿ ಅಧಿಕಾರ ಸ್ಥಾನಗಳಿಗಾಗಿ ಸದಾ ಅಂಟಿಕೊಂಡಿರುತ್ತಾರೆ.

121. ಸಮಷ್ಟಿ ಪ್ರಶ್ನೆ ಇತಿಹಾಸದುದ್ದಕ್ಕೂ ಪ್ರಶ್ನೆಯಾಗಿಯೇ ಉಳಿದು ಬಂದು ಭವಿಷ್ಯಕ್ಕೆ ಸವಾಲಾಗಿ ನಿಂತಿದೆ.

122. ಸನ್ನಡತೆಗಳ ಕ್ರಿಯಾಚರಣೆಗಳೇ ಜಗತ್ತು ನೈತಿಕ ಪಥದಲ್ಲಿ ಸಾಗುವಂತೆ ನಿರ್ದೇಶಿಸಬಲ್ಲವಾಗಿವೆ.

123. ಯಾರೇ ವ್ಯಕ್ತಿಯಾಗಿರಲಿ ಆತನ ಅರ್ಹತೆಯು ಆತ ಗಳಿಸಿರಬಹುದಾದ ಅರ್ಹತಾ-ಪತ್ರಗಳಲ್ಲಿರದೆ ಆತನು ರೂಪಿಸಿಕೊಂಡಿರುವ ನಡುವಳಿಕೆಯಲ್ಲಿರುತ್ತದೆ.

124. ಪ್ರಜಾಪ್ರಭುತ್ವವಿರುವೆಡೆಯಲ್ಲಿ ಆರ್ಥಿಕ ಸಮಾನತೆಯೆಂಬುದು ಇರುವುದಿಲ್ಲ.

125. ಪ್ರತಿಭಾವಂತರ ಹೋಲಿಕೆಗಳು ಮೂರ್ಖರವುಗಳ ಪ್ರತೀಕಗಳಿದ್ದಂತೆ. ಏಕೆಂದರೆ ಪ್ರತಿಭಾ ಕೌಶಲ್ಯದಲ್ಲಿ ವಿಶಿಷ್ಟತೆಗಳಿದ್ದೇ ಇರುತ್ತವೆ.

126. ಸಂಕುಚಿತ ಮನಸ್ಕರಿಗೆ ಉದಾರದವನು ಮಹಾನನ್ನೂ ಸಂಕುಚಿತನಂತೇ ನೋಡುತ್ತಾನೆ.

127. ಸಾಹಿತ್ಯಕ ವೃತ್ತಿಯಲ್ಲಿ ಭಾಷೆಯು ಪರಿಪಕ್ವಗೊಳ್ಳುತ್ತದೆ. ಅಂತೆಯೇ ಪರಿಪಕ್ವಗೊಂಡ ಭಾಷೆಯು ವ್ಯಾಪಕವಾಗಿ ಹೊಸ ಕ್ಷೇತ್ರಗಳ ವಿಸ್ತೃತಕಾರಿ ಬೆಳವಣಿಗೆಗೆ ಸಹಕರಿತಗೊಳ್ಳಬೇಕಾಗಿದೆ.

128. ಏಕಾಗ್ರತಾ ಸಾಮರ್ಥ್ಯ ವಿಕಾಸಗೊಳ್ಳದೆ ಆಲೋಚನಾ ಮನೋ-ಭಾವ ವಿಸ್ತೃತಗೊಳ್ಳಲಾರದು.

129. ನಮ್ಮ ಪೂರ್ವಿಕರು ನಮಗೆ ಬಿಡುವಂತಹ ಎಲ್ಲಾ ಬಗೆಯ ಕ್ರಿಯೆಗಳೆಲ್ಲಾ ಪರಿಷ್ಕೃತಗೊಳ್ಳದೆ ಅಂಗೀಕೃತಗೊಳ್ಳಬಾರದು.

130. ಇಂದು ನಾವು ಬದುಕುತ್ತಿರುವ ಪ್ರಸಕ್ತ ಸಮಾಜದಲ್ಲಿ ಅಧಿಕವಾಗಿ ಸ್ವತಂತ್ರ್ಯನಾಗದ ವ್ಯಕ್ತಿಗೆ ಗೌರವವು ಸಿಗುತ್ತಿಲ್ಲ.

131. ಆತ್ಮವಿಶ್ವಾಸವನ್ನು ಕಳೆದುಕೊಳ್ಳುವುದು ಸುಲಭ ಆದರೆ ಪುನಃ ಗಳಿಸಿಕೊಳ್ಳುವುದು ಬಹಳ ಕಷ್ಟಕರವಾಗಿ ಪರಿಣಮಿಸುತ್ತದೆ.

132. ಆದರ್ಶಮಯ ಮೌಲ್ಯಗಳನ್ನು ತನ್ನ ಜೀವನದಲ್ಲಿ ಆವಿರ್ಭವಿಸಿ ಕೊಳ್ಳದವನು ಉತ್ತಮ ವ್ಯಕ್ತಿತ್ವವನ್ನು ಹೊಂದಲಾಗುವುದಿಲ್ಲ.

133. ವಿಚಾರಗಳನ್ನು ನಿವೇದಿಸುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿಭಾವಂತರೇ ಉಪಯೋಗಿಸಿಕೊಳ್ಳದಿದ್ದರೆ ಶ್ರೀಸಾಮಾನ್ಯನ ಪಾಡೇನಾದೀತು?

134. ನೀತಿ ಭ್ರಷ್ಟನಾದ ವ್ಯಕ್ತಿಯು ಜಗತ್ತಿನ ದುಷ್ಕೃತ್ಯಗಳಿಗೆ ಪ್ರೋತ್ಸಾಹಕನೂ ಪೋಷಕನೂ ಆಗಿರುತ್ತಾನೆ.

135. ಜಗತ್ತಿನಲ್ಲಿನ ಪ್ರಚಲಿತ ಗಂಭೀರ ಸಮಸ್ಯೆಗಳಿಗೆ ಕಾರಣವಾಗಿರುವುದು ಸೈದ್ಧಾಂತಿಕ ನಿಲುವುಗಳಲ್ಲಿನ ನ್ಯೂನ್ಯತೆಗಳಾದ್ದರಿಂದ ಮಾನವ ಅನಿವಾರ್ಯವಾಗಿ ಜಾಗತಿಕ ಮಟ್ಟದ ವಿಶ್ಲೇಷಣೆಗಳನ್ನು ಮಾಡಿಕೊಂಡು ಪರಸ್ಪರ ವಿಚಾರ ವಿನಿಮಯಗಳ ವೇದಿಕೆಯಲ್ಲೇ ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ.

136. ವಿವಾದಾತ್ಮಕ ವಿಚಾರಗಳನ್ನು ಆಳ ಅಧ್ಯಯನದ ಪರಾಮರ್ಶೆಯಿಂದ ಪರಿಶೀಲಿಸದೆ ಪ್ರಸ್ತಾಪಿಸುವುದು ಸರಿಯಲ್ಲ.

137. ನಮ್ಮ ದೇಶದಲ್ಲಿ ಆಚರಿಸುವ ಹಬ್ಬಗಳನ್ನು ಹಳ್ಳಿಗರು ಆಧ್ಯಾತ್ಮಿಕ ದೃಷ್ಟಿಯಿಂದ ನೋಡಿದರೆ ಪಟ್ಟಣಿಗರು ಮೋಜಿನ ದೃಷ್ಟಿಯಿಂದ ಆಚರಿಸುವಂತಿದೆ.

138. ಕಷ್ಟ ಸಹಿಷ್ಣುತಾ ಮನೋಭಾವವಿಲ್ಲದ ವ್ಯಕ್ತಿ ಎಂದೂ ಪ್ರಸಿದ್ಧಿಗೆ ಬರಲಾರ. ಮತ್ತೊಬ್ಬರ ಪ್ರತಿಭೆಗೆ ಅಂಜಿ ತನ್ನ ಪ್ರತಿಭೆಯನ್ನು ಪ್ರದರ್ಶಿಸದವನೂ ಪ್ರಸಿದ್ಧಿಗೆ ಬರಲಾರ.

139. ಮಾನವನ ಅಳಿವು-ಉಳಿವಿನ ಮೇಲೆ ಜೀವಸಂಕುಲದ ಅಳಿವು-ಉಳಿವು ಅವಲಂಬಿತವಾಗಿದೆ.

140. ಮಾನವನು ಸಂಕಟ ಬಂದಾಗ ಸಹಾಯವನ್ನು, ಸಂತಸದಿಂದಿರುವಾಗ ಸ್ವಾರ್ಥವನ್ನು, ದುಃಖ ಬಂದಾಗ ಇನ್ನೊಬ್ಬರ ಆಸರೆಯನ್ನೂ ಅಪೇಕ್ಷಿಸುತ್ತಾನೆ.

141. ವ್ಯಕ್ತಿಯೊಬ್ಬ ಕಲಿಯುವ ಮನೋಭಾವವುಳ್ಳವನ ತನಕ ಮತ್ತೊಬ್ಬರನ್ನು ಅನುಕರಿಸಬೇಕು. ತಾನು ಕಲಿತಿರುವುದನ್ನು ಪ್ರದರ್ಶಿಸಬೇಕಾದಾಗ ತನ್ನ ಸ್ವಂತಿಕೆಯನ್ನುಳಿಸಿ ಕೊಳ್ಳಬೇಕು.

142 ಒಳ್ಳೆಯವರೂ ಕೆಟ್ಟವರೂ ಕೂಡಿ ಬದುಕುತ್ತಿರುವ ಈ ಜಗತ್ತಿನಲ್ಲಿ ಒಮ್ಮೊಮ್ಮೆ ಯಾರು ಒಳ್ಳೆಯವರು? ಯಾರು ಕೆಟ್ಟವರು? ಎಂದು ನಿರ್ಧರಿಸುವುದೇ ಕಷ್ಟಕರವಾದೀತು.

143. ಸ್ವಂತ ಪ್ರತಿಫಲ–ದಾನ, ಪರರ ಪ್ರತಿಫಲ–ಇತರರಿಗೆ ಉಪಯೋಗ; ಇತರರಿಗೆ ಉಪಯೋಗದ ಪ್ರತಿಫಲ–ತೃಪ್ತಿ; ತೃಪ್ತಿಯ ಉಪಯೋಗದ ಪ್ರತಿಫಲ ಜಗತ್ತು ನಿರಂತರವಾಗಿ ಅತೃಪ್ತವಾಗಿರುತ್ತದೆ.

144. ನೂರಾರು ಯೋಜನೆಗಳನ್ನು ಹಾಕಿಕೊಂಡು [illegible] ಬುದ್ಧಿ-ಹಂತವನ್ನು ಕಳೆದುಕೊಳ್ಳುವವನಿಗಿಂತ ಹಾಕಿಕೊಂಡ ಯೋಜನೆಗಳಲ್ಲಿ ಒಂದನ್ನು ಶಕ್ತಿ-ಯುತವಾಗಿ ಸಾಧಿಸಲಾಗದೇ ಅನುಭವಶಾಸ್ತ್ರ ವಶಪಡಿಸಿಕೊಳ್ಳುತ್ತಾನೆ.

145. ಮಾನವರ ವಿವೇಚನೆಯಿಂದ ಆಲೋಚನಾ ಸಾಮರ್ಥ್ಯ ವಿಕಸಿತ-ಗೊಳ್ಳುತ್ತದೆ. ವಿಷಯಗಳ ಅಧ್ಯಯನದಿಂದ ಜ್ಞಾನ ವಿಸ್ತಾರಗೊಳ್ಳುತ್ತದೆ. ಪ್ರಾಪ್ತ-ವಾದ ಜ್ಞಾನದ ವಿಶ್ಲೇಷಣೆಯಿಂದ ನೂತನ ವಿಷಯಗಳ ಉಗಮವಾಗುತ್ತದೆ.

146. ಪ್ರಕೃತಿಯ ಮಡಿಲಲ್ಲಿ [illegible] ನಿಗೂಢತೆಯು ಮಾನವ-ರನ್ನು [illegible]–[illegible], [illegible] ಮಾನವನ [illegible] [illegible] [illegible].

147. ಸಾರ್ವಜನಿಕ ಮೌಲ್ಯಗಳನ್ನು ಪಾಲಿಸುವುದೇ [illegible] ನಾಗರಿಕತೆಗಳು ಸಂಸ್ಕೃತಿಗಳು [illegible] [illegible].

148. ವಿಜ್ಞಾನದ ಸಾಧನೆಗಳ [illegible] [illegible] [illegible] ಗಳ ಪ್ರಮಾಣವು [illegible] [illegible] [illegible] ದಲ್ಲಿ [illegible] [illegible] [illegible] [illegible] [illegible] ಗೊಳ್ಳುತ್ತಿದೆ.

150. ಆಧುನಿಕ ವ್ಯಕ್ತಿಗಳ ಜಂಜಾಟವು ಯಂತ್ರದ ಯುಗ [illegible] ಮುಂದೆ ವಿಧಿ, ಅವ್ಯಕ್ತಗಳ "ಕಣ್ಣು ಮುಚ್ಚಾಲೆಯ" ಆಟವಾಗುವಂತೆಯಲ್ಲಿ ತಿರುಗು-ತ್ತಿರುಗುತ್ತದೆ. ಅದರಲ್ಲಿ ಆಧುನಿಕ ವ್ಯಕ್ತಿ ಜೀವನದ ವ್ಯಕ್ತಿಯನ್ನು, [illegible] [illegible] ಮನೋಗತವನ್ನು ಗುರುತಿಸಿಕೊಂಡು ಆ [illegible] [illegible] [illegible] [illegible] ಪರಿಣಾಮಗಳನ್ನು ಯೋಚಿಸಿ, ಮುಂದಿನ [illegible] [illegible].

150. ಜೀವಿತದ ಮೌಲ್ಯಗಳನ್ನು ಅರಿಯುವಲ್ಲಿ ಮುಖ್ಯಾಗಿರುತ್ತದೆ ಇನ್ನು ಸಂವರ್ಧಿಸಿಕೊಂಡ ಜೀವಿತಾನುಭವಗಳನ್ನು ಪಾಲಿಸುವುದೆಲ್ಲಿ? ಹೀಗಾಗಿ ಯುವ ಜನತೆಯ ಅನುಭವ ರಹಿತ ದೈಹಿಕ ಶಕ್ತಿ ಹಾಗೂ ವಯಸ್ಕ್ಯಾದವರ ಅನುಭವಾತ್ಮಕ ಮಾನಸಿಕ ಯುಕ್ತಿ ಮಿಲನಗೊಂಡಾಗಲೇ ಮನುಸಂಕುಲದ ಸಾಮೂಹಿಕವಾದ ಸುಗಮ ಜೀವನ ಸಾಧ್ಯವಾಗುತ್ತದೆ.

151. ಪ್ರಸಕ್ತ ಜಗತ್ತಿನಲ್ಲಿ ವಿಜ್ಞಾನ ಎಷ್ಟರ ಮಟ್ಟಿಗೆ ಮುಂದುವರಿದಿದೆ ಎಂದರೆ ಪ್ರಗತಿ-ನಾಶಗಳ ನಡುವಿನ ಒಂದನ್ನು ತ್ವರಿತವಾಗ ಆರಿಸಿಕೊಳ್ಳಲೂ ಮಾನವನಿಗೆ ಸಮಯಾವಕಾಶ ಅಭಾವವಿದ್ದಂತಿದೆ.

152. ಕಲ್ಪನಾತ್ಮಕ ಆಧ್ಯಾತ್ಮ ಮೂಢ ನಂಬಿಕೆಗಳು ವಿಶ್ವದ ವಾಸ್ತವ್ಯತೆಗಳನ್ನು ಬಹಿರಂಗವಾಗಿ ಅರಿತುಕೊಳ್ಳಲು ಅಡಚಣೆಗಳನ್ನೊಡ್ಡುತ್ತದೆ.

153. ಆಧ್ಯಾತ್ಮ ವಿಚಾರಗಳಿಂದ ಮಾನವ ಭಾವನಾತ್ಮಕ ತುಮುಲತೆಗಳಿಗೆ ಒಳಗಾಗುವಂತೆ ವೈಜ್ಞಾನಿಕ ವಿಚಾರಗಳಿಂದ ಮಾನವ ಕುತೂಹಲ ಭರಿತನಾಗ ಬಹುದಾಗಿದೆ.

154. ನಿರಂತರ ಇಂದ್ರಿಯ ಗ್ರಹಣತೆ-ಸ್ಮೃತಿ ಶೀಘ್ರತೆಯನ್ನು ಬಿಂಬಿಸುತ್ತದೆ. ಪ್ರತಿಭೆ ಜ್ಞಾನಾರ್ಜನೆಯನ್ನು ಬಿಂಬಿಸುತ್ತದೆ, ಸದ್ಭಾವನೆಗಳೇ ಆತ್ಮೀಯತೆಯನ್ನು ಬಿಂಬಿಸುತ್ತದೆ.

155. ಆಲೋಚನಾತ್ಮಕ ಭಾವನಾ ತರಂಗಗಳು ನಮ್ಮ ಶಕ್ತಿಯ ಸೂಚಕಗಳು; ಯುಕ್ತಿಯ ಪ್ರೇರಕಗಳು; ಉದ್ದೇಶ ಸಾಫಲ್ಯೀಕರಣದ ಮಾಪನಗಳು, ಸಾಧನೆಯ ಪಥವನ್ನು ನಿರ್ದೇಶಿಸುವ "ಸನ್ಮಾರ್ಗದರ್ಶಿ„ ಯೂ ಆಗಬಲ್ಲದಾಗಿದೆ.

156. ಬುದ್ಧಿವಂತರೆಂದೆನಿಸಿಕೊಳ್ಳುವ ಪ್ರತಿಭಾವಂತರು ಯಾವುದೇ ವಿಷಯದ ಚರ್ಚೆಗಾಗಲೀ ಒಂದೆಡೆ ಸೇರಿದರೆ ವಿಷಯದ ಮಹತ್ತ್ವವನ್ನು ಮರೆತು ತಮ್ಮಗಳ ಪ್ರತಿಭಾ ಪ್ರತಿಷ್ಠೆಯ ಹೋಲಿಕೆ ಮಾಡಿಕೊಳ್ಳುವುದರಲ್ಲೇ ಸಮಯವನ್ನು ವ್ಯರ್ಥಪಡಿಸಿಕೊಳ್ಳುತ್ತಾರೆ.

157. ಅನುಭವಗಳು ಪಠ್ಯಪುಸ್ತಕಗಳಿಂದಷ್ಟು; ಸಮಾಜದಿಂದ ಸಾಮರ್ಥ್ಯ ಪಠ್ಯಗಳಿಗೆ ಪ್ರಬಲವಾಗಿದೆ.

158. ವಿದ್ಯಾರ್ಥಿಗಳು ಸಾಹಿತ್ಯಿಕವಾದ ವ್ಯಕ್ತಿಗಳನ್ನಾಗಿ ಬೆಳೆಸುವ ಪದಕ ಜೊತೆ ಜಿಜ್ಞಾಸೆಗಳ ಶಬ್ದಗಳನ್ನು ಓದುವ ಜನ ಅದ ಸತ್ವ ಬೇಕು ಜೊತೆಗೆ ಒಳ್ಳೆ ಸತ್ವದ ಪ್ರಯೋಗಗಳನ್ನು ಮಾಡುವುದು ಅಭ್ಯಾಸವಾಗಿದೆ.

159. ಮಗುವ ಭಾಷಾಶಕ್ತಿ ಅಂದರೆ ಸಮರ್ಥತೆಯ ಪ್ರಮಾಣವು ಶಾಲೆಯ ಸಾಮರ್ಥ್ಯದಿಂದಲೇ ಬಹಳಷ್ಟು ನಿರ್ಧರಿಸಲ್ಪಡುತ್ತದೆ.

160. ಪ್ರತಿಯೊಂದು ಸಂಗತಿ ವಿವರಣೆಯನ್ನು ಅರಿಯುವುದಕ್ಕೆ ಮಗು ಅದರ ಹಿಂದೆ ಪ್ರತಿಭೆಯನ್ನು ಅರಿಯುವುದು ಅವಶ್ಯಕ.

161. ನಾನಾ ಶಿಕ್ಷಣ-ಅಕ್ಷರ ಜ್ಞಾನವನ್ನು, ಪ್ರೌಢಶಾಲಾ ಶಿಕ್ಷಣ-ಮಟ್ಟದ-ಜ್ಞಾನವನ್ನು; ಕಾಲೇಜು ಶಿಕ್ಷಣ-ಮಟ್ಟದ ಜ್ಞಾನವನ್ನು ಪಡೆದುಕೊಂಡು-ಹಾಗೆ ಪ್ರಗತಿಪರ ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯು ರೂಪುಗೊಂಡಿದೆ.

162. ಓದುವಿಕೆ ಸಾಹಿತ್ಯ ಜೀವನವನ್ನು ಶ್ರೀಮಂತಗೊಳಿಸುತ್ತದೆ. ಓದುವಿಕೆ ಸಾಹಿತ್ಯ ಅಧಿಕ ಪ್ರಸಂಗಿಕತೆಯ ಅನುಭವವನ್ನು ಕೊಡುತ್ತದೆ.

163. ಕಲಿಯುವ ಮಗುವಿನ ಕಾಲ ಪಠ್ಯದ ಘಟನಾವಳಿಗಳಿಂದ ಅತ್ಯ ವಿದ್ಯಾರ್ಥಿಗಳನ್ನು ಸಂಘಟಿತಗೊಳಿಸುವಂತಾಗಲು ಹಲವು ವಿಚಾರಗಳನ್ನು ಉಪಯೋಗಿಸಿ-ಕೊಳ್ಳಬೇಕೇ ವಿನಃ ಕಟುವಾದ ವಿಚಾರಗಳಲ್ಲ.

164. ವ್ಯಕ್ತಿಗತ ಪ್ರತಿಭೆಗಳ ಬೆಳವಣಿಗೆಯಿಂದ ಸರ್ವರಿಗೂ ಸಲ್ಲುವ ಸಂಘಟಿತ ದೃಷ್ಟಿಗಳ ಅಭ್ಯಾಸಕ್ಕೆ ಅವಕಾಶ ದೊರಕುವಂತಾಗುತ್ತದೆ ಅದರ ವೈಚಿತ್ರ್ಯತೆಗಳಿಂದ ಯಾರಿಗೂ ನಷ್ಟವಿಲ್ಲ ಅದರಿಂದ ಕಾಲ ದೃಷ್ಟಿಯು ವಿಸ್ತೃತಗೊಳ್ಳುತ್ತದೆ.

179. ಯುವ ಶಕ್ತಿಯು ಪ್ರತಿ ದೇಶದ ಪ್ರಗತಿಗೆ ಬೆನ್ನೆಲುಬಿನಂತಿದ್ದು ಇಂತಹ ಯುವ ಪೀಳಿಗೆಯನ್ನು ತಮ್ಮ ದೇಶದ ಸಾಧನೆಗಳಿಗಾಗಿ ಯಂತ್ರಗಳನ್ನಾಗಿ ಹಿರಿಯರು ಬಳಸಿಕೊಳ್ಳದೆ ಅವರ ಭವಿಷ್ಯದ ಉಜ್ವಲತೆಗೆ ಜಗತ್ತಿನಿಂದ ತಾವು ನಿರ್ಗಮಿಸುವ ಮುನ್ನವೇ ತಮ್ಮ ಸರ್ವಸ್ವವನ್ನೂ ಸಮರ್ಪಿಸುವ ದೂರದೃಷ್ಟಿಯನ್ನುಳ್ಳಬೇಕು.

180. ಪ್ರಾಚೀನ ವಿಚಾರಗಳ ಅಸ್ಫುಟತೆಯನ್ನಳಿಸಿಕೊಂಡು ಅವುಗಳನ್ನು ಸಮಕಾಲೀನ ಪಡಿಸಲೆತ್ನಿಸುವ ಗುರುತರ ಹೊಣೆ ಇಂದಿನ ನಾಗರೀಕ ಸಮಾಜಗಳ ವಿದ್ವತ್ ಜನರದ್ದಾಗಿದೆ.

181. ಕಡಿಮೆ ಓದು ಹೆಚ್ಚು ಅಂಕಗಳಿಕೆ ಎಂಬ ವಿದ್ಯಾರ್ಥಿಗಳ ನಾಗರೀಕ ನೀತಿ; ಕಡಿಮೆ ದುಡಿಮೆ ಹೆಚ್ಚು ಹಣಗಳಿಕೆ ಎಂಬ ಶ್ರಮಿಕರ ನಾಗರೀಕ ನೀತಿಯಿಂದಾಗಿ ಸೋಮಾರಿತನವು ಹೆಚ್ಚಾಗುತ್ತಿದೆ.

182. ಇನ್ನೊಬ್ಬರ ದೃಷ್ಟಿಯಲ್ಲಿ ನಾವು ಕೀಳಾಗುವುದೂ ಬೇಡ, ಅವರನ್ನು ಕೀಳಾಗಿ ಕಾಣುವುದೂ ಬೇಡ ಎಂಬ ಮನೋಭಾವವು ಜನಸಾಮಾನ್ಯರಲ್ಲಿ ಬಂದಾಗಲೇ ಅಸೂಯಾತ್ಮಕ ಪ್ರವೃತ್ತಿ ಶಮನ ಗೊಳ್ಳುತ್ತದೆ.

183. ಹಣದ ಮೂಲಕ ವ್ಯಕ್ತಿಗಳನ್ನು ಅಳೆಯುತ್ತಿರುವ ಇಂದಿನ ನಮ್ಮ ಸಮಾಜವು ಭಾವನಾತ್ಮಕವಾಗಿ ಅವಸಾನವನ್ನು ಹೊಂದುತ್ತಲಿದೆ.

184. ಅಪರಿಮಿತವಾಗಿ ದುಡಿಯುತ್ತಿರುವ ವ್ಯಕ್ತಿಯು ಅಪರಿಮಿತ ಬಯಕೆಗಳನ್ನು ಹೊಂದಿದ್ದರೆ ಅದಕ್ಕೆ ಅರ್ಥವಿದೆ. ಆದರೆ ಏನನ್ನೂ ದುಡಿಯದೆ ಸೋಮಾರಿಯಾಗಿದ್ದುಕೊಂಡು ಅಪರಿಮಿತ ಬಯಕೆಗಳನ್ನು ಹೊಂದುವವನು ಸಮಾಜನಷ್ಟವೆ ಮತ್ತೇನು?

185. ಗಂಡಿಗೆ ಹೆಣ್ಣು ಎಷ್ಟು ಅನಿವಾರ್ಯವೋ ಹೆಣ್ಣಿಗೂ ಗಂಡು ಅಷ್ಟೇ ಅಗತ್ಯ.

186. [illegible]

187. [illegible]

6895

188. [illegible]

189. [illegible]

190. [illegible]

191. [illegible]

192. [illegible]

193. [illegible]

194. [illegible]

165. ಕಷ್ಟ-ನಷ್ಟಗಳು, ನಿಂದನೆ-ಅಪಚಾರಗಳನ್ನು ಎದುರಿಸದೆ ಯಾವೊಬ್ಬ ವ್ಯಕ್ತಿಯೂ ಪ್ರಸಿದ್ಧಿಗೆ ಬರಲಾಗದು ಪ್ರಾಯಶಃ ಇದೂ ತನಕ ಹಾಗೆಯಾರೂ ಪ್ರಸಿದ್ಧರಾಗಿಯೂ ಇಲ್ಲ.

166. ಮನುಷ್ಯತ್ವದ ತತ್ವವು ಪ್ರಕೃತಿ ಸಂಪನ್ಮೂಲಗಳ ಸದ್ವಿನಿಯೋಗಕ್ಕೆ ಬಳಕೆಯಾಗಬೇಕೇ ವಿನಃ ಮನುಷ್ಯನ ನಾಶಕ್ಕಾಗಿಯಲ್ಲ.

167. ವ್ಯಕ್ತಿಯೊಬ್ಬ ತಾನು ಗುರಿ ಇರಿಸಿಕೊಳ್ಳುವಾಗ ಇರುವ ಸ್ಫೂರ್ತಿ-ಯುಂಪಗಳು ಆತ ಇರಿಸಿಕೊಂಡ ಗುರಿಯು ಕ್ರಿಯಾಶೀಲತೆಗಿಳಿದಾಗ ಬರಬರುತ್ತಾ ಸಡಿಲಗೊಳ್ಳುತ್ತದೆ.

168. ನಮ್ಮಲ್ಲಿ ಮತ್ತೊಬ್ಬರ ತಪ್ಪುಗಳನ್ನು ಕಂಡುಹಿಡಿಯುವವರೇ ಅಧಿಕ, ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳದೆ ಬೇರೆಯವರು ತಪ್ಪುಗಳನ್ನು ಮಾಡಲು ಪ್ರೇರೇಪಿಸುವವರೂ ಅಲ್ಪರೇನಿಲ್ಲ. ತಾವು ತಪ್ಪು ಮಾಡಿ ಹಿಡಿಯದೆ ಬೇರೆಯವರೂ ತಪ್ಪುಗಳನ್ನು ಮಾಡಲಿರಲಿ ಎಂದು ಘೋಷಿಸುವವರು ಅತಿ ವಿರಳ ಪ್ರಮಾಣದಲ್ಲಿದ್ದಾರೆ.

169. ಮಾನವನು ಜಗತ್ತಿನಲ್ಲಿ ನಿಗೂಢವಾಗಿರುವ ಅವ್ಯಕ್ತತೆಗಳನ್ನು ತನ್ನ ಅಂದಾಜಿನ ಹಾದಿಯಲ್ಲಿ ಗುರ್ತಿಸಿಕೊಳ್ಳುತ್ತಾ ಮುನ್ನಡೆದಿದ್ದಾನೆ. ಹೀಗೆ ಮಾನವ ಮುನ್ನಡೆದೂ ಸಾಧಿಸುವುದಾದರೂ ಏನಿರಬಹುದು? ಇದು ಮಾತ್ರ ನಿಗೂಢವಾಗಿಯೇ ಉಳಿದಿದೆ.

170. ಮಾನವನ ಬಳಿಯಿರುವುದು ಬ್ರಹ್ಮಾಂಡದ ಚರಿತ್ರೆಯಲ್ಲಾ ಮನುಷ್ಯಕುಲದ ಸೃಷ್ಟಿ ಪೂರ್ವಕ ಲಕ್ಷ್ಯಾಂತರ 20 ನೆಯ ಶತಮಾನಗಳನ್ನು ಅಲ್ಪ ಚರಿತ್ರೆಯಷ್ಟೇ.

171. ಪಾಲಿಗೆ ಬಂದ ಕಾರ್ಯವನ್ನು ದಕ್ಷತೆಯಿಂದ, ಪ್ರಾಮಾಣಿಕವಾಗಿ ಹೊಣೆಗಾರಿಕೆಯರಿತು ನಿಷ್ಠೆಯಿಂದ ಕ್ರಿಯಾಶೀಲನಾಗುವವನೇ ಉತ್ತಮ ಕೆಲಸಗಾರನಾಗಬಲ್ಲ.

172. ಧೈರ್ಯ ಆತ್ಮವಿಶ್ವಾಸ ಅಸ್ಮಿತೆ, ನಿರ್ಣಯಕ ಶಕ್ತಿ, ವಿದ್ವತ್ತತೆಗಳು ಅನುಕರಣೀಯವಾಗಿ ವ್ಯಕ್ತಿಯೊಬ್ಬನಿಗೆ ಮನಗತವಾಗಲಾರವು

ಆಗಲ್ಲ ಅನುಭವ, ಅಧ್ಯಯನದಿಂದಷ್ಟೇ ಮುಂದುವರಿಯಬಲ್ಲದಾಗಿದೆ.

173. ಕೋಪಮಾಡಿಕೆ, ಸಂಕುಚಿತ ದೃಷ್ಟಿಗಳು, ಬೆಳೆದ ಮನೋಭಾವ ದಂಬಿಕೆ ಮತ್ಸರ, ಆಲಸ್ಯ, ಕೃತಘ್ನತೆ, ಅಪ್ರೀತಿ ಗುಣಗಳೆಲ್ಲಾ ಮನು-ಷ್ಯನಿಗೆ ದ್ರೋಹಗಳನ್ನುಂಟುಮಾಡುವುವು.

174. ಆತ್ಮೀಯತಾ ಮನೋಭಾವವುಳ್ಳ ಹೋರಾಟದ ವ್ಯಕ್ತಿಯು ಬಲ್ಲ ವ್ಯವಹಾರವನ್ನು ಮಾಡಿದಂತೆ ಆತ್ಮೀಯತೆಯನ್ನು ಹೊಂದಲಾಗದಂತಹ ಕೆಲವು ತನ್ನ ತೃಪ್ತಿಯನ್ನಷ್ಟೇ ಪಡೆಯ ಬಲ್ಲವನಾಗಿರುತ್ತಾನೆ.

175. ಜಗತ್ತಿನಾದ್ಯಂತದ ಪ್ರಚಲಿತ ಸಮಸ್ಯಾತ್ಮಕ ವಿಚಾರಗಳ ಬಗ್ಗೆ ಜನ-ಸಾಮಾನ್ಯರನ್ನುಳಿದು ಧನಿಕರ ಯೋಚನಾಶಕ್ತಿ ಬೆಳೆಯಬೇಕಾಗಿದೆ.

176. ಉತ್ತಮ ಬುದ್ಧಿಗಳನ್ನು ತಿಳಿದವನೇ ನಿಜವಾದ ಶ್ರೀಮಂತ. ಅಂಥ ಜ್ಞಾನಿ ದರಿದ್ರನಾದವನೇ ಬುದ್ಧಿವಂತ ಎನ್ನುವುದು ತಪ್ಪು. ತಾರ್ಕಿಕ ದೃಷ್ಟಿಯಿಂದ ಜಗತ್ತನ್ನು ಪರಿಶೀಲಿಸಿದರೆ ಸಹಜವಾಗಿ ಬುದ್ಧಿ ಸಾಮರ್ಥ್ಯವು-ಳ್ಳವ್ಯಕ್ತಿ ತನ್ನ ಉಳಿದವರೊಡನೆ ಸಂಘರ್ಷ-ಸಹಿಷ್ಣುತೆಗಳ ಪ್ರಭಾವದಿಂದಾಗಿ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾನೆ. ಹೀಗಾಗಿ ಬುದ್ಧಿವಂತ - ದಡ್ಡರೆಂಬ ಭೇದ ಭಾವ ಸಲ್ಲದಾಗಿದೆ.

177. ಪ್ರತಿಭೆಯನ್ನು-ಉತ್ತಮ ವ್ಯಕ್ತಿತ್ವವನ್ನು ಬಂಡವಾಳ ವಾಗಿ ಕೊಂಡು ವ್ಯಕ್ತಿಯೊಬ್ಬ ಪ್ರಗತಿಪರನಾಗಬೇಕೆ ವಿನಾ ಮತ್ತೊಬ್ಬ ವ್ಯಕ್ತಿಯನ್ನು ತುಳಿದು ಮುಂದೆ ಬರುತ್ತೇನೆಂದು ಭಾವಿಸಿದ್ದರೆ ಅದು ತಪ್ಪು ನಿರ್ಧಾರ ವಾಗಬಲ್ಲುದು.

178. ಹೇಳ ಬಯಸುವ ವಿಚಾರವನ್ನು ಯಾವ ವ್ಯಕ್ತಿ ತನ್ನ ಮನಸ್ಸಿನಲ್ಲಿ ಗಟ್ಟಿಯಾಗಿ ಸ್ಥಿರ ತರ್ಕಶಕ್ತಿಯೊಂದಿಗೆ ಬಿಂಬಿಸುತ್ತಾನೋ ಆತನೇ ಉತ್ತಮ ವಾಗ್ಮಿಯಾಗುತ್ತಾನೆ. ಆತನಲ್ಲಿ ವಿಷಯ ಪ್ರಜ್ಞೆಯು ಸಮಯ ಪ್ರಜ್ಞೆಯೊಂದಿಗೆ ಸದಾ ಸ್ಪಂದಿಸುತ್ತಿರಬೇಕು.

ಕಳೆದುಕೊಳ್ಳದೆ "ಪ್ರಯತ್ನಶೀಲ" ಸ್ವಭಾವವನ್ನು ಮಾನವ ಪರಿಪಾಲಿಸು-ವಂತಾಗಬೇಕು.

195. ಮಾನವನ ದೌರ್ಬಲ್ಯಗಳ ಬುನಾದಿಯೇ ಸಂಕುಚಿತ ದೃಷ್ಟಿಗಳಾ-ಗಿರುತ್ತವೆ.

196. ಇಂದಿನ ಯುವಕರು ತಮ್ಮ ಸ್ವಾತಂತ್ರ್ಯ ವ್ಯಕ್ತಿತ್ವವನ್ನು ನಿರೂಪಿಸಿಕೊಳ್ಳಲು ಹಿರಿಯರೇ ಅಡ್ಡಿಯಾಗಿರುವುದರ ಕಾರಣ ಸುಪ್ತವಾಗಿಯೇ ಉಳಿದಿದೆ.

197. ಇಂದಿನ ವೈಜ್ಞಾನಿಕ ಯುಗದಲ್ಲಿ ತೀವ್ರಗಾಮಿತ್ವ ತೀರಾ ಅಪಾಯಕಾರಿಯಾಗಬಲ್ಲದಾಗಿದ್ದು ಮಾನವ ಬಹಳ ಜಾಗರೂಕನಾಗಿ ಬಾಳ-ಬೇಕಾಗಿದೆ. ಮಾನವನು ಈ ತನಕ ತನ್ನ ಅಸ್ತಿತ್ವವನ್ನು ಗಂಡಾಂತರಗಳಿಂದ ಉಳಿಸಿಕೊಂಡು ಬಂದಿರುವುದೇ ಅತಿ ದೊಡ್ಡ ಸಾಹಸವಾಗಿದ್ದು, ಮುಂದಿನ ಜೀವಿತ ಪ್ರಕ್ರಿಯೆಗಳ ಬಗ್ಗೆ ಕುತೂಹಲ ಹೆಚ್ಚಾಗುವಂತಾಗಿದೆ.

198. ಮೂಕಜೀವಿಗಳಿಗಿಂತ ಕಡೆಯಾಗಿ ಕೆಲವೆಡೆಗಳಲ್ಲಿ ಬಾಳುತ್ತಿರುವ ಮಾನವನು ತನ್ನ ಬದುಕಿನ ಸ್ವಾತಂತ್ರ್ಯಕ್ಕೆ ಕಳಂಕವನ್ನು ತಂದುಕೊಂಡಿ-ದ್ದಾನೆ.

199. ಜಗತ್ತಿನಲ್ಲಿ ಬದುಕಿರುವಾಗ ವಿಭಿನ್ನಮಯ ದೃಷ್ಟಿಗಳಿಂದ ಬದುಕಿ-ಬಾಳಿ ಬದಲಾವಣೆಗಳಿಗೆ ಒಳಗಾಗಿ, ನಿರೀಕ್ಷೆಗಳಿಗೆ ಒಳಗಾಗಿ, ಸಂತಸಾನಂದಗಳ ಅನುಭವ ಕಂಡು, ದುಃಖ-ದುಮ್ಮಾನಗಳಿಗೆ ಬಲಿಯಾಗಿ ಪಶ್ಚಾತ್ತಾಪ-ಪ್ರಾಯಶ್ಚಿತ್ತ-ಗಳಿಂದ ಜರ್ಜರಿತರಾಗಿ ಕಣ್ಮರೆಯಾಗಿರುವ ಅಸಂಖ್ಯಾತ ಮನುಷ್ಯರಿದ್ದಾರೆ ಆದರೆ ಅವರ ಸಾವಿನ ಬಳಿಕ ಅಮೂಲಾಗ್ರವಾಗಿ ಅವರು ಯಾವ ಸಾರ್ಥ-ಕತೆಯನ್ನು ಕೊಂಡೊಯ್ದಿರಬಹುದು?

200. ಸಮಗ್ರ ಮನುಸಂಕುಲ ಸದೃಷ್ಟಿಯಿಂದ ಬಾಳಬೇಕು, ನ್ಯೂನ್ಯತೆಗಳು ಹೋಗಿ ಅನ್ಯೋನ್ಯತೆಗಳು ಸಕ್ರಿಯತೆಗೆಟುಕಬೇಕು.



ನನ್ನ ಮುಂಬರುವ ಕೃತಿಗಳು

1) ವಿಶ್ವಮಾನವೀಯತೆ

2) ಅಂತರರಾಷ್ಟ್ರೀಯ ಪತ್ತೇದಾರರು

3) ಹಣದ ಪ್ರಪಂಚ

4) ಮಂತ್ರವಾದಿಗಳ ಲೋಕಗಳು